KABI030008212023

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ಬಳ್ಳಾರಿ .

-: ಉಪಸ್ಥಿತರು :-

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಬಳ್ಳಾರಿ .

ಅಸಲು ದಾವಾ ಸಂಖ್ಯೆ 167/2023

ದಿನಾಂಕಃ 30 ನೇ ನವೆಂಬರ್ 2024

ವಾದಿ/ಯರುಃ ಶ್ರೀಮತಿ ಸುರೇಖ ಬಿ. ಕೋಂ ಕ್ರಿಷ್ಣ ಕಿಶೋರ್ ಎಸ್., ವಯಸ್ಸುಃ 36 ವರ್ಷ, ವಾಸಃ ವೆಂಕಟೇಶ್ವರ ನಗರ, 2 ನೇ ಕ್ರಾಸ್, ಬಳ್ಳಾರಿ. ಹಾಲಿ ವಾಸಃ ವೈಭವ ಆರ್ಚಿಡ್ ಅಪಾರ್ಟ್ಮೆಂಟ್, 7 ನೇ ಮುಖ್ಯ ರಸ್ತೆ, ವಿಶ್ವಜಿತ್, ಲೇಔಟ್,ವಿಜ್ಞಾನ ನಗರ, ಎಲ್.ಎನ್.ರೆಡ್ಡಿ ಕಾಲೋನಿ, ಬೆಂಗಳೂರು-560 037.

(ಪ್ರತಿನಿಧಿಸುವವರುಃ ಶ್ರೀ ಮಂಜುನಾಥ ರೆಡ್ಡಿ ಟಿ. ನ್ಯಾಯವಾದಿಗಳು)

- ವಿರುದ್ಧ -

ಪ್ರತಿವಾದಿ/ಯರುಃ ವೇಣುಗೋಪಾಲ ಬಾದಾಮಿ ಬಿನ್ ರಂಗ ರಾವ್ ಬಾದಾಮಿ, ವಯಸ್ಕರು, ವಾಸಃ ಮನೆ ನಂ.22, ವಿಜಯಶ್ರೀ ಮೊದಲನೇ ಮಹಡಿ, 3 ನೇ ಕ್ರಾಸ್, ಸತ್ಯನಾರಾಯಣ ಪೇಟೆ, ಅಂಚೆ ಕಛೇರಿ ಎದುರುಗಡೆ , ಬಳ್ಳಾರಿ.

(ಪ್ರತಿನಿಧಿಸುವವರುಃ ಶ್ರೀ ಜಿ.ಜೆ.ಎನ್., ನ್ಯಾಯವಾದಿಗಳು)

1	ದಾವಾ ದಾಖಲಿಸಿದ ದಿನಾಂಕ	13.03.2023
2	ದಾವಾ ಸ್ವರೂಪ	ಹಣ ವಸೂಲಾತಿ ದಾವೆ
3	ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ	04.12.2023

4	ತೀರ್ಪನ್ನು ಉದ್ಘೋಷಿಸಿದ ದಿನಾಂಕ	30-11-2023		
5	ತೆಗೆದುಕೊಂಡ ಅವಧಿ	ವರ್ಷ	ತಿಂಗಳು	ದಿನಗಳು
		01	**08**	**17**

-ತೀರ್ಪು-

ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ರೂ.4,44,800/-ನ್ನು ವಾರ್ಷಿಕ ಶೇ.24 ರಂತೆ ಬಡ್ಡಿ ಸಹಿತ ಪಾವತಿಸುವಂತೆ ಡಿಕ್ರಿ ಮಾಡಬೇಕಾಗಿ ಕೋರಿ ಸಲ್ಲಿಸಿರುತ್ತಾರೆ.

2. ಈ ದಾವೆಯ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆ:-

ವಾದಿಗೆ ಪ್ರತಿಯಾದಿಯು ತನ್ನ ಗಂಡನ ಮುಖಾಂತರ ಪರಿಚಯ ಇರುತ್ತಾರೆ. ಸದರಿ ತನ್ನ ಗಂಡನಿಗೆ ಪ್ರತಿವಾದಿಯು ಪ್ರತಿವಾದಿಯ ಸೋದರನಾದ ಗುರುರಾಜ್ ಬಾದಾಮಿ ರವರ ಮುಖಾಂತರ ಪರಿಚಯ ಇರುತ್ತಾರೆ. ಸದರಿ ಪ್ರತಿವಾದಿಯು ದಿನಾಂಕ:20.02.2021 ರಂದು ವಾದಿಯ ಹತ್ತಿರ ಬಂದು ರೂ.3,00,000/- ಹಣವನ್ನು ತನ್ನ ವ್ಯಾಪಾರದ ಅಭಿವೃದ್ಧಿಗಾಗಿ ಕೊಡುವಂತೆ ಕೇಳಿರುತ್ತಾರೆ. ನಂತರ ವಾದಿಯು ದಿ:22.02.2021 ರಂದು ರೂ.3,00,000/- ಹಣವನ್ನು ಪ್ರತಿವಾದಿಯ ಖಾತೆಗೆ ಆರ್.ಟಿ.ಜಿ.ಎಸ್/ನೆಫ್ಟ್ ಮೂಲಕ ಹಣವನ್ನು ಸಂದಾಯವನ್ನು ಮಾಡಿರುತ್ತಾರೆ. ಸದರಿ ಹಣವನ್ನು ಪ್ರತಿವಾದಿಯು ಮೂರು ತಿಂಗಳ ಒಳಗಾಗಿ ಮರು ಪಾವತಿಸುವುದಾಗಿ ಒಪ್ಪಿಕೊಂಡಿರುತ್ತಾರೆ. ಸದರಿ ಹಣವನ್ನು ಪ್ರತಿವಾದಿಯು ನಿಗದಿತ ಕಾಲದಲ್ಲಿ ಹಣವನ್ನು ಪಾವತಿಸದೇ ಇದ್ದ ಕಾರಣ ವಾದಿಯು ಪ್ರತಿವಾದಿಯನ್ನು ಹಣವನ್ನು ಕೇಳಿದಾಗ ಪ್ರತಿವಾದಿಯು ಸಾಲವನ್ನು ವಾರ್ಷಿಕ ಪ್ರತಿಶತ ಶೇ.24% ರಷ್ಟು ಬಡ್ಡಿಯ ಮೂಲಕ ಮರು ಪಾವತಿಸುವುದಾಗಿ ತಿಳಿಸಿರುತ್ತಾರೆ. ಪ್ರತಿವಾದಿಯು ಹಣವನ್ನು ಮರು ಪಾವತಿಸಲು ಒಂದಲ್ಲ ಒಂದು ಕಾರಣವನ್ನು ಹೇಳಿ ಮುಂದೂಡುತ್ತಾ ಬಂದಿರುತ್ತಾರೆ. ಸದರಿ ಹಣದ ಮರು ಪಾವತಿಗಾಗಿ ಪ್ರತಿವಾದಿಯು

ದಿನಾಂಕ:05.05.2022 ರಂದು ಯನೈಟೆಡ್ ಬ್ಯಾಂಕ್ ಇಂಡಿಯಾ, ಬಳ್ಳಾರಿ ಶಾಖೆಯ ಚೆಕ್‌ನ್ನು ದಿನಾಂಕ:22.05.2022 ಎಂದು ಹಾಗೂ ರೂ.3,00,000/- ಹಣವನ್ನು ನಮೂದಿಸಿ ವಾದಿಗೆ ನೀಡಿರುತ್ತಾರೆ. ತದನಂತರ ಪ್ರತಿವಾದಿಯ ವಿನಂತಿಯ ಮೇರೆಗೆ ವಾದಿಯು ಪ್ರತಿವಾದಿಯು ನೀಡಿದ ಚೆಕ್ಕನ್ನು ನಗದೀಕರಣಕ್ಕಾಗಿ ತನಗೆ ಸೇರಿದ ಸಿಟಿ ಬ್ಯಾಂಕ್, ಬೆಂಗಳೂರು ಶಾಖೆಗೆ ದಿನಾಂಕ:20.08.2022 ರಂದು ಹಾಜರುಪಡಿಸಿದ್ದು, ಸದರಿ ಚೆಕ್ಕನ್ನು ಪ್ರತಿವಾದಿಯ ಬ್ಯಾಂಕಿಗೆ ನಗದೀಕರಣಕ್ಕಾಗಿ ಕಳುಹಿಸಿದ್ದು, ಪ್ರತಿವಾದಿಗೆ ಸೂಚಿಸುವಂತೆ ('Refer to Drawer') ಎಂಬ ಹಿಂಬರಹದೊಂದಿಗೆ ದಿನಾಂಕ: 22.08.2022 ರಂದು ಹಿಂತಿರುಗಿಸಿರುತ್ತಾರೆ. ಸದರಿ ಹಿಂಬರಹವನ್ನು ಪಡೆದ ನಂತರ ವಾದಿಯು ಪ್ರತಿವಾದಿಗೆ ದಿನಾಂಕ 24.11.2022 ರಂದು ಕಾನೂನು ತಿಳುವಳಿಕೆ ನೋಟೀಸನ್ನು ತಮ್ಮ ವಕೀಲರ ಮೂಲಕ ನೀಡಿದ್ದು, ಸದರಿ ನೋಟೀಸನ್ನು ಪ್ರತಿವಾದಿಯು ಸ್ವೀಕರಿಸಿದ ನಂತರವೂ ಪ್ರತಿವಾದಿಯು ಚೆಕ್ಕಿನ ಹಣವನ್ನು ಪಾವತಿಸಿರುವುದಿಲ್ಲ. ನಂತರ ವಾದಿಯು ಈ ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ಸಲ್ಲಿಸಿರುತ್ತಾರೆ.

3. ಈ ಪ್ರಕರಣದಲ್ಲಿ ವಾದಿಯ ದಾವೆಯನ್ನು ದಾಖಲಿಸಿಕೊಂಡ ನಂತರ ಪ್ರತಿವಾದಿಗೆ ನ್ಯಾಯಾಲಯದ ಮೂಲಕ ನೋಟೀಸನ್ನು ಜಾರಿಗೊಳಿಸಿದ್ದು, ಪ್ರತಿವಾದಿಯು ತನ್ನ ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:

ವಾದಿ ಮತ್ತು ವಾದಿಯ ಗಂಡನಿಗೆ ಪ್ರತಿವಾದಿಯ ಸಹೋದರನಾದ ಗುರುರಾಜ್ ಬಾದಾಮಿರವರ ಪರಿಚಯ ಇರುತ್ತದೆ. ಪ್ರತಿವಾದಿಯು ತನ್ನ ಸಹೋದರನಾದ ಗುರುರಾಜ್ ಬಾದಾಮಿರವರ ಮೂಲಕ ದಿನಾಂಕ:10.02.2020 ರಂದು ರೂ.2 ಲಕ್ಷ ಹಣವನ್ನು ವಾದಿಯಿಂದ ಪಡೆದಿದ್ದು, ಸದರಿ ಸಮಯದಲ್ಲಿ ಪ್ರತಿವಾದಿಯು ವಾದಿಯ ಪರವಾಗಿ ಒಂದು ಕರಾರು ಪತ್ರವನ್ನು ಜಾರಿ ಮಾಡಿಕೊಟ್ಟಿರುತ್ತಾರೆ. ಆದರ ಜೊತೆಗೆ ಪ್ರತಿವಾದಿಯು ಸಹಿ ಮಾಡಿದ ಒಂದು ಖಾಲಿ ಚೆಕ್ಕನ್ನು ವಾದಿಗೆ ಹಣದ

ಭದ್ರತೆಗಾಗಿ ನೀಡಿರುತ್ತಾರೆ. ಪ್ರತಿವಾದಿಯು ವಾದಿಗೆ ಭದ್ರತೆಗಾಗಿ ನೀಡಿರುವ ಚೆಕ್ಕು ಸಂಖ್ಯೆ 346117 ಆಗಿರುತ್ತದೆ. ತದನಂತರ ಪ್ರತಿವಾದಿಯು ದಿನಾಂಕ:11.11.2020 ರಂದು ವಾದಿಗೆ ತಾನು ಪಡೆದ ಸಾಲವನ್ನು ವಾದಿಯ ಖಾತೆಗೆ ನೆಫ್ಟ್ ಮುಖಾಂತರ ವರ್ಗಾಯಿಸಿರುತ್ತಾರೆ. ತದನಂತರ ವಾದಿಯು ಕರಾರು ಪತ್ರವನ್ನು ಮರಳಿ ಕೊಟ್ಟಿರುತ್ತಾರೆ. ಆದರೆ ಚೆಕ್ಕು ಮನೆಯಲ್ಲಿ ಎಲ್ಲೋ ಇರುತ್ತದೆ ಎಂದು ಹೇಳಿರುತ್ತಾರೆ. ತದನಂತರ ಪ್ರತಿವಾದಿಯು ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ದಿನಾಂಕ 17.06.2022 ರಂದು ಲೆಟರ್ ನ್ನು ನೀಡಿ ಚೆಕ್ಕು ಸಂಖ್ಯೆ 346117 ಖಾತೆ ಸಂಖ್ಯೆ:2119010036713 ಚೆಕ್ಕಿನ ಹಣವನ್ನು ಪಾವತಿಸದಂತೆ ಹೇಳಿರುತ್ತಾರೆ. ವಾದಿಗೆ ಪ್ರತಿವಾದಿಯು ಹಲವಾರು ಬಾರಿ ತನ್ನ ಚೆಕ್ಕನ್ನು ತನಗೆ ಮರಳಿ ಕೊಡುವಂತೆ ಕೇಳಿದ್ದಾಗ್ಯೂ ಸಹ ವಾದಿಯು ತನ್ನ ಚೆಕ್ಕನ್ನು ಮರಳಿ ಕೊಟ್ಟಿರುವುದಿಲ್ಲ. ಯುನೈಟೆಡ್ ಬ್ಯಾಂಕ್‌ವು ಪಂಜಾಬ್ ನ್ಯಾಷನಲ್ ಬ್ಯಾಂಕಿನೊಂದಿಗೆ ವಿಲೀನಗೊಂಡಿರುತ್ತದೆ. ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವಂತೆ ಪ್ರತಿವಾದಿಯು ಒಂದು ವೇಳೆ ರೂ3 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದರೆ ಕರಾರು ಪತ್ರವನ್ನು ಬರೆಸಿಕೊಳ್ಳುತ್ತಿದ್ದರು ಮತ್ತು ಭದ್ರತೆಗಾಗಿ ಚೆಕ್ಕನ್ನು ಪಡೆಯುತ್ತಿದ್ದರು. ಪ್ರತಿವಾದಿಯು ವಾದಿಗೆ ನೀಡಿರುವ ಖಾಲಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ಹಾಗಾಗಿ ಈ ಮೇಲಿನ ಕಾರಣಗಳಿಗಾಗಿ ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕಾಗಿ ಪ್ರಾರ್ಥಿಸಿಕೊಂಡಿರುತ್ತಾರೆ.

4. ಮೇಲ್ಕಾಣಿಸಿದ ಉಭಯ ಪಕ್ಷಗಾರರ ವಾದ ಪ್ರತಿವಾದ ಪತ್ರಗಳಲ್ಲಿನ ಸಂಗತಿಗಳನ್ನು ಆಧರಿಸಿ ಈ ಕೆಳಗಿನಂತೆ ವಿವಾದಾಂಶಗಳನ್ನು ರೂಪಿಸಿರುತ್ತದೆ.

<u>ವಿವಾದಾಂಶಗಳು</u>

1. Whether the plaintiff proves that, the defendant has borrowed a sum of Rs.3,00,000/- on 22.02.2021 by executing demand promissory note? (Recasted)

2. Whether the plaintiff proves that defendant issued a post dated cheque dated 22.05.2022 for Rs.3,00,000/- drawn on United Bank of India, Ballari Branch towards the repayment of loan amount?

3. Whether the plaintiff further proves that said cheque was dishonored for 'Refer to Drawer' dated 22.08.2022?

4. Whether the defendant proves that cheque bearing No.346117 was issued has a security to the loan amount of Rs.2,00,000/-?

5. Whether the plaintiff is entitled for the recovery of money of Rs.4,44,800/-?

6. Whether the plaintiff is entitled for the future interest at the rate of 24% p.m.?

7. What order or Decree?

RE-CASTED ISSUE NO.1 dated 22.11.2024

1. Whether the plaintiff proves that, the defendant has borrowed a loan for a sum of Rs.3,00,000/- on 22.02.2021?

5. ಈ ಮೇಲ್ಕಂಡ ವಿವಾದಾಂಶಗಳನ್ನು ರುಜುವಾತು ಪಡಿಸಲು ವಾದಿಯು ತನ್ನನ್ನು ತಾನು ಪಿ.ಡಬ್ಲೂ.1 ಎಂದು ಸಾಕ್ಷಿ ಮಾಡಿಸಿದ್ದು, ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿ.ಪಿ..1 ರಿಂದ 6 ರಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ. ವಾದಿಯು ತನ್ನ ಪರವಾಗಿ ವಾದಿಯ ಗಂಡನಾದ ಕೃಷ್ಣ ಕಿಶೋರ್ ಎಂಬುವವರನ್ನು ಪಿ.ಡಬ್ಲ್ಯೂ.2 ಎಂದು ಮತ್ತು ಪಂಜಾಬ್ ನ್ಯಾಷನಲ್ ಬಾಂಕ್ ನ ಮ್ಯಾನೇಜರ್ ಆದ ಅನಿತಾ ಕುಮಾರಿ ಎಂಬುವವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ.

ಇದಕ್ಕೆ ಪ್ರತಿಯಾಗಿ ಪ್ರತಿವಾದಿಯು ತಮ್ಮ ಪರವಾಗಿ ತನ್ನನ್ನು ತಾನು ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿ.ಡಿ.1 ರಂತೆ ದಾಖಲಾತಿಯನ್ನು ನಿಶಾನಿಸಿರುತ್ತಾರೆ.

6. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

7. ಮೇಲ್ಕಾಣಿಸಿದ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ:-

ಮರು ರೂಪಿಸಲಾದ ವಿವಾದಾಂಶ 1 - ಸಕಾರಾತ್ಮಕವಾಗಿ

ವಿವಾದಾಂಶ 2 - ಸಕಾರಾತ್ಮಕವಾಗಿ

ವಿವಾದಾಂಶ 3 - ಸಕಾರಾತ್ಮಕವಾಗಿ

ವಿವಾದಾಂಶ 4 - ನಕಾರಾತ್ಮಕವಾಗಿ

ವಿವಾದಾಂಶ 5 – ಭಾಗಶಃ ಸಕಾರಾತ್ಮಕವಾಗಿ

ವಿವಾದಾಂಶ 6 - ಭಾಗಶಃ ಸಕಾರಾತ್ಮಕವಾಗಿ

ವಿವಾದಾಂಶ 7 - ಅಂತಿಮ ಆದೇಶದಂತೆ

ಕಾ ರ ಣ ಗ ಳು

8. ವಿವಾದಾಂಶ 1 ರಿಂದ 6 :- ಈ ಎಲ್ಲಾ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇಯಾಗಿರುವುದರಿಂದಲೂ ಈ ಎಲ್ಲಾ ವಿವಾದಾಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

9. ಈ ವಿವಾದಾಂಶ ಸಂಖ್ಯೆ 1 ರಿಂದ 3, 5 ಹಾಗೂ 6 ಗಳನ್ನು ಸಾಬೀತುಪಡಿಸುವಂತಹ ಹೊಣೆಗಾರಿಕೆಯನ್ನು ವಾದಿಯು ಹೊಂದಿದ್ದು, ವಿವಾದಾಂಶ ಸಂಖ್ಯೆ4 ನ್ನು ಸಾಬೀತು ಪಡಿಸುವ ಹೊಣೆಗಾರಿಕೆಯನ್ನು ಪ್ರತಿವಾದಿಯು ಹೊಂದಿದ್ದು, ಸದರಿ ವಿವಾದಾಂಶಗಳನ್ನು ಸಾಬೀತುಪಡಿಸಲು ವಾದಿಯು ನ್ಯಾಯಾಲಯದಲ್ಲಿ ಹಾಜರಾಗಿ ತನ್ನ ಪರವಾಗಿ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ನೀಡಿರುತ್ತಾರೆ.

10. ಈ ವಿವಾದಾಂಶಗಳ ಕುರಿತು ವಾದಿಯು ತನ್ನ ವಾದಪತ್ರದಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆಃ-

ವಾದಿ ಮತ್ತು ಪ್ರತಿವಾದಿಯು ಒಬ್ಬರಿಗೊಬ್ಬರು ಪರಿಚಯಸ್ಥರಿದ್ದು, ಪ್ರತಿವಾದಿಯು ದಿನಾಂಕಃ20.02.2021 ರಂದು ವಾದಿಗೆ ರೂ.3,00,000/- ಹಣವನ್ನು ತನ್ನ ವ್ಯಾಪಾರದ ಅಭಿವೃದ್ಧಿಗಾಗಿ ಕೊಡುವಂತೆ ಕೇಳಿದ್ದರು ನಂತರ ವಾದಿಯು ದಿಃ22.02.2021 ರಂದು ರೂ.3,00,000/- ಹಣವನ್ನು ಪ್ರತಿವಾದಿಯ ಖಾತೆಗೆ ಆರ್.ಟಿ.ಜಿ.ಎಸ್/ನೆಫ್ಟ್ ಮೂಲಕ ಹಣವನ್ನು ವರ್ಗಾಯಿಸಿರುತ್ತಾರೆ. ಸದರಿ ಹಣದ ಮರು ಪಾವತಿಗಾಗಿ ಪ್ರತಿವಾದಿಯು ತನಗೆ ಸೇರಿದ ಯನೈಟೆಡ್ ಬ್ಯಾಂಕ್ ಆಫ್ ಇಂಡಿಯಾ, ಬಳ್ಳಾರಿ ಶಾಖೆಯ ಚೆಕ್‌ನ್ನು ದಿನಾಂಕಃ05.05.2022 ರಂದು ರೂ.3,00,000/- ಹಾಗೂ ದಿನಾಂಕಃ22.05.2022 ಎಂದು ನಮೂದಿಸಿ ವಾದಿಗೆ ನೀಡಿರುತ್ತಾರೆ. ತದನಂತರ ಪ್ರತಿವಾದಿಯ ವಿನಂತಿಯ ಮೇರೆಗೆ ವಾದಿಯು ಚೆಕ್ಕನ್ನು ನಗದೀಕರಣಕ್ಕಾಗಿ ತನಗೆ ಸೇರಿದ ಸಿಟಿ ಬ್ಯಾಂಕ್, ಬೆಂಗಳೂರು ಶಾಖೆಗೆ ದಿನಾಂಕಃ20.08.2022 ರಂದು ಹಾಜರುಪಡಿಸಿದ್ದು, ಸದರಿ ಚೆಕ್ಕನ್ನು ಪ್ರತಿವಾದಿಯ ಬ್ಯಾಂಕಿಗೆ ನಗದೀಕರಣಕ್ಕಾಗಿ ಕಳುಹಿಸಿದ್ದು, ಪ್ರತಿವಾದಿಗೆ ಸೂಚಿಸುವಂತೆ ('Refer to Drawer') ಎಂಬ ಹಿಂಬರಹದೊಂದಿಗೆ ದಿನಾಂಕಃ 22.08.2022 ರಂದು ಹಿಂತಿರುಗಿಸಿರುತ್ತಾರೆ. ಸದರಿ ಹಿಂಬರಹವನ್ನು ಪಡೆದ ನಂತರ ವಾದಿಯು ಪ್ರತಿವಾದಿಗೆ ದಿನಾಂಕ 24.11.2022 ರಂದು ಕಾನೂನು ತಿಳುವಳಿಕೆ ನೋಟೀಸನ್ನು ತಮ್ಮ ವಕೀಲರ ಮೂಲಕ ನೀಡಿದ್ದು, ಸದರಿ ನೋಟೀಸನ್ನು ಪ್ರತಿವಾದಿಯು ಸ್ವೀಕರಿಸಿದ ನಂತರವೂ ಪ್ರತಿವಾದಿಯು ಚೆಕ್ಕಿನ ಹಣವನ್ನು ಪಾವತಿಸಿರುವುದಿಲ್ಲ ಎಂದು ಹೇಳಿರುತ್ತಾರೆ.

11. ಈ ವಿವಾದಾಂಶಗಳ ಕುರಿತು ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆಃ

ವಾದಿ ಮತ್ತು ವಾದಿಯ ಗಂಡನಿಗೆ ಪ್ರತಿವಾದಿಯ ಸಹೋದರನಾದ ಗುರುರಾಜ್ ಬಾದಾಮಿರವರ ಪರಿಚಯ ಇರುತ್ತದೆ. ಪ್ರತಿವಾದಿಯು ತನ್ನ

ಸಹೋದರನಾದ ಗುರುರಾಜ್ ಬಾದಾಮಿರವರ ಮೂಲಕ ದಿನಾಂಕ:10.02.2020 ರಂದು ರೂ.2 ಲಕ್ಷ ಹಣವನ್ನು ವಾದಿಯಿಂದ ಪಡೆದಿದ್ದು, ಸದರಿ ಸಮಯದಲ್ಲಿ ಪ್ರತಿವಾದಿಯು ವಾದಿಯ ಪರವಾಗಿ ಒಂದು ಕರಾರು ಪತ್ರವನ್ನು ಜಾರಿ ಮಾಡಿಕೊಟ್ಟಿರುತ್ತಾರೆ. ಆದರ ಜೊತೆಗೆ ಪ್ರತಿವಾದಿಯು ಸಹಿ ಮಾಡಿದ ಒಂದು ಖಾಲಿ ಚೆಕ್ಕನ್ನು ವಾದಿಗೆ ಹಣದ ಭದ್ರತೆಗಾಗಿ ನೀಡಿರುತ್ತಾರೆ. ಪ್ರತಿವಾದಿಯು ವಾದಿಗೆ ಭದ್ರತೆಗಾಗಿ ನೀಡಿರುವ ಚೆಕ್ಕು ಸಂಖ್ಯೆ 346117 ಆಗಿರುತ್ತದೆ. ತದನಂತರ ಪ್ರತಿವಾದಿಯು ದಿನಾಂಕ:11.11.2020 ರಂದು ವಾದಿಗೆ ಸಾಲವನ್ನು ನೆಫ್ಟ್ ಮುಖಾಂತರ ವಾದಿಯ ಖಾತೆಗೆ ವರ್ಗಾಯಿಸಿರುತ್ತಾರೆ. ತದನಂತರ ವಾದಿಯು ಕರಾರು ಪತ್ರವನ್ನು ಮರಳಿ ಕೊಟ್ಟಿರುತ್ತಾರೆ ಆದರೆ ಚೆಕ್ಕು ಮನೆಯಲ್ಲಿ ಎಲ್ಲೋ ಇರುತ್ತದೆ ಎಂದು ಹೇಳಿರುತ್ತಾರೆ. ತದನಂತರ ಪ್ರತಿವಾದಿಯು ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ದಿನಾಂಕ 17.06.2022 ರಂದು ಲೆಟರ್ ನ್ನು ನೀಡಿ ಚೆಕ್ಕು ಸಂಖ್ಯೆ 346117 ಖಾತೆ ಸಂಖ್ಯೆ:2119010036713 ಚೆಕ್ಕಿನ ಹಣವನ್ನು ಪಾವತಿಸದಂತೆ ಹೇಳಿರುತ್ತಾರೆ. ವಾದಿಗೆ ಪ್ರತಿವಾದಿಯು ಹಲವಾರು ಬಾರಿ ತನ್ನ ಚೆಕ್ಕನ್ನು ತನಗೆ ಮರಳಿ ಕೊಡುವಂತೆ ಕೇಳಿದ್ದಾಗ್ಯೂ ಸಹ ವಾದಿಯು ತನ್ನ ಚೆಕ್ಕನ್ನು ಮರಳಿ ಕೊಟ್ಟಿರುವುದಿಲ್ಲ. ಪ್ರತಿವಾದಿಯು ವಾದಿಗೆ ನೀಡಿರುವ ಖಾಲಿ ಚೆಕ್ಕನ್ನು ವಾದಿಯು ದುರುಪಯೋಗ ಪಡಿಸಿಕೊಂಡು ಈ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರೆ. ಹಾಗಾಗಿ ವಾದಿಯು ಸಲ್ಲಿಸಿರುವ ದಾವೆಯನ್ನು ವಜಾಗೊಳಿಸಬೇಕಾಗಿ ಪ್ರಾರ್ಥಿಸಿಕೊಂಡಿರುತ್ತಾರೆ.

12. ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳ ಸಮರ್ಥನೆಗಾಗಿ ತನ್ನನ್ನು ತಾನು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಗುರಿಪಡಿಸಿಕೊಂಡಿದ್ದು, ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ ಪಿ.ಡಬ್ಲ್ಯೂ.1 ರವರು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ವಾದಿಯ ಗಂಡನಾದ ಕೃಷ್ಣ

ಕಿಶೋರ್ ಎಂಬುವವರನ್ನು ಪಿ.ಡಬ್ಲ್ಯೂ.2 ಎಂದು ಮತ್ತು ಪಂಜಾಬ್ ನ್ಯಾಷನಲ್ ಬಾಂಕ್ ನ ಮ್ಯಾನೇಜರ್ ಆದ ಅನಿತಾ ಕುಮಾರಿ ಎಂಬುವವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಪಿ.ಡಬ್ಲ್ಯೂ.1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿ.ಪಿ.1 ರಂತೆ ಚೆಕ್ಕನ್ನು, ನಿಶಾನೆ ಪಿ. 1 (ಎ) ರಂತೆ ಪ್ರತಿವಾದಿಯ ಸಹಿಯನ್ನು, ನಿಶಾನೆ ಪಿ.2 ರಂತೆ ಬ್ಯಾಂಕಿನವರು ನೀಡಿದ ಹಿಂಬರವನ್ನು, ನಿ.ಪಿ.3 ರಂತೆ ವಕೀಲರ ಮುಖಾಂತರ ನೀಡಿರುವ ನೋಟೀಸ್‌ನ್ನು, ನಿ.ಪಿ.4 ರಂತೆ ಅಂಚೆ ರಸೀದಿಯನ್ನು, ನಿ.ಪಿ.5 ರಂತೆ ಅಂಚೆ ಸ್ವೀಕೃತಿ ಪ್ರತಿಯನ್ನು, ನಿ.ಪಿ.6 ರಂತೆ ಅಕೌಂಟ್ ಎಕ್ಸ್ಟ್ರಾಕ್ಟನ್ನು ಹಾಜರುಪಡಿಸಿರುತ್ತಾರೆ.

13. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಸಾಬೀತುಪಡಿಸಲು ತನ್ನನ್ನು ತಾನು ಡಿ.ಡಬ್ಲ್ಯೂ.**1** ಎಂದು ಸಾಕ್ಷಿ ವಿಚಾರಣೆ ಮಾಡಿಕೊಂಡಿದ್ದು, ಸದರಿ ಡಿ.ಡಬ್ಲ್ಯೂ.**1** ರವರು ತಮ್ಮ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿ ಪ್ರತಿವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ಡಿ.ಡಬ್ಲ್ಯೂ.**1** ರವರು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ. ಪ್ರತಿವಾದಿ ಪರ ವಕೀಲರು ಪಿ.ಡಬ್ಲ್ಯೂ.**3** ರವರ ಪಾಟೀ ಸವಾಲಿನಲ್ಲಿ ಒಂದು ಲೆಟರ್ ನ್ನು ಪಿ.ಡಬ್ಲ್ಯೂ.**3** ರವರಿಗೆ ಮುಖಾಬಲೆ **(Confront)** ಮಾಡಿ ನಿ.ಡಿ.**1** ರ ದಾಖಲಾತಿಯನ್ನು ಗುರುತಿಸಿಕೊಂಡಿರುತ್ತಾರೆ.

14. ಈ ಮೇಲಿನ ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಹಾಗೂ ವಾದ ವಿವಾದಗಳನ್ನು ಪರಿಶೀಲಿಸಲಾಯಿತು ವಾದಿಯ ಪ್ರಕಾರ ತನ್ನಿಂದ ಪ್ರತಿವಾದಿಯು ದಿನಾಂಕ **22.02.2021** ರಂದು ರೂ.**3,00,000/-** ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣದ ಮರು ಪಾವತಿಗಾಗಿ ನಿಶಾನೆ.ಪಿ.**1** ರ ಚೆಕ್ಕನ್ನು ನೀಡಿರುತ್ತಾರೆ ಎಂಬುದಾಗಿರುತ್ತದೆ. ಇದಕ್ಕೆಪ್ರತಿಯಾಗಿ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದು, ತಾನು ವಾದಿಯಿಂದ ಯಾವುದೇ ಹಣವನ್ನು ಪಡೆದಿಲ್ಲ

ಹಾಗೂ ಯಾವುದೇ ಚೆಕ್ಕನ್ನು ಸಹ ವಾದಿಗೆ ನೀಡಿಲ್ಲ ಪ್ರತಿವಾದಿಯು ವಾದಿಯಿಂದ ದಿನಾಕಃ**10.02.2020** ರಂದು ರೂ. **2** ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲವನ್ನು ಪ್ರತಿವಾದಿಯು ಮರು ಪಾವತಿಮಾಡಿದ್ದಾಗ್ಯೂ ಸಹ ವಾದಿಯು ಚೆಕ್ಕನ್ನು ತನಗೆ ಮರಳಿ ಕೊಟ್ಟಿರುವುದಿಲ್ಲ. ಸದರಿ ಹಣವನ್ನು ಪಡೆಯುವ ಸಮಯದಲ್ಲಿ ವಾದಿಗೆ ಭದ್ರತೆಗಾಗಿ ನೀಡಿರುವ ಖಾಲಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರೆ.

15. ಈ ಕುರಿತು ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ರುಜುವಾತು ಪಡಿಸಲು ವಾದಿಯು ನಿ.ಪಿ.1 ರಂತೆ ಚೆಕ್ಕನ್ನು ಹಾಜರುಪಡಿಸಿದ್ದು, ಸದರಿ ನಿ.ಪಿ.1 ರ ಚೆಕ್ಕನ್ನು ಪರಿಶೀಲಿಸಿದಾಗ ದಿನಾಂಕ 22.05.2022 ರಂದು ವಾದಿಯ ಹೆಸರಿಗೆ ಚೆಕ್ಕು ಸಂಖ್ಯೆ 346117 ರೂ.3,00,000/- ಹಣವನ್ನು ನಮೂದಿಸಿ ನೀಡಿರುವುದು ಮತ್ತು ಸದರಿ ಚೆಕ್ಕಿಗೆ ಪ್ರತಿವಾದಿಯ ಸಹಿ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಕುರಿತು ಉಭಯ ಪಕ್ಷಗಾರರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

16. ಪಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ಮತ್ತು ಪ್ರತಿವಾದಿಯು ಮಧ್ಯೆ ಈ ದಾವೆಯಲ್ಲಿ ಹೇಳಿರುವ ಹಣದ ವ್ಯವಹಾರವನ್ನು ಹೊರತುಪಡಿಸಿ ಇನ್ನೊಂದು ಹಣದ ವ್ಯವಹಾರವು ತನ್ನ ಮತ್ತು ಪ್ರತಿವಾದಿಯ ಮಧ್ಯೆ ಆಗಿರುತ್ತದೆ. ಸದರಿ ತನ್ನ ಮತ್ತು ಪ್ರತಿವಾದಿಯ ಮಧ್ಯೆ ಆದ ಇನ್ನೊಂದು ಹಣದ ವ್ಯವಹಾರವು 2 ಲಕ್ಷ ಹಣದ ಕುರಿತು ಆಗಿರುತ್ತದೆ ಎಂದರೆ ಸರಿ. ತನ್ನ ಮತ್ತು ಪ್ರತಿವಾದಿಯ ಮಧ್ಯೆ2 ಲಕ್ಷ ಹಣದ ವ್ಯವಹಾರವಾಗುವಾಗ ತಾನು ಪ್ರತಿವಾದಿಯಿಂದ ಯಾವುದೇ ಚೆಕ್ಕನ್ನು ಪಡೆದಿರುವುದಿಲ್ಲ. ತನ್ನ ಮತ್ತು ಪ್ರತಿವಾದಿಯ ಮಧ್ಯೆ 3 ಲಕ್ಷ ರೂಪಾಯಿ ಹಣದ ವ್ಯವಹಾರವಾಗುವ ಸಮಯದಲ್ಲಿ ತಾನು ಆರೋಪಿಯಿಂದ ಭದ್ರತೆಗಾಗಿ ಚೆಕ್ಕನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಿನಾಂಕಃ 10.02.2020 ರಂದು ತನ್ನಿಂದ 2 ಲಕ್ಷ ರೂಪಾಯಿ ಹಣವನ್ನು ಪಡೆದಿರುತ್ತಾನೆ ಎಂದರೆ ಸರಿ. ಪ್ರತಿವಾದಿಯು ದಿನಾಂಕಃ 11.11.2020 ರಂದು ಸದರಿ 2 ಲಕ್ಷ ರೂಪಾಯಿ

ಹಣವನ್ನು ತನಗೆ ಮರು ಪಾವತಿಸಿರುತ್ತಾನೆ ಎಂದರೆ ಸರಿ. ಪ್ರತಿವಾದಿಯು ಯಾವ ಉದ್ಯೋಗವನ್ನು ಮಾಡುತ್ತಾನೆ ತನಗೆ ಗೊತ್ತಿಲ್ಲ. ತನ್ನ ಗಂಡನು ಐ.ಟಿ. ಕಂಪನಿಯಲ್ಲಿ ಕೆಲಸ ಮಾಡುತ್ತಾನೆ. ದಿನಾಂಕಃ 20.02.2021 ರಂದು ತನ್ನ ಖಾತೆಯಲ್ಲಿ 3 ಲಕ್ಷ ರೂಪಾಯಿ ಹಣ ಇರಲಿಲ್ಲ ಎಂದರೆ ಸರಿ. ನಿಪಿ-1 ರ ಚೆಕ್ಕು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕವು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಮರ್ಜ್ ಮಾರ್ಚ್ 2021 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತಾನು ತನ್ನ ಖಾತೆಯಿಂದ ಪ್ರತಿವಾದಿಯ ಖಾತೆಗೆ ಒಂದೇ ಬಾರಿ 3 ಲಕ್ಷ ರೂಪಾಯಿ ಹಣವನ್ನು ವರ್ಗಾವಣೆ ಮಾಡಿರುವ ಬಗ್ಗೆ ತನಗೆ ನೆನಪಿರುತ್ತದೆ. ತಾನು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಲ್ಲಿ ಇರುವ ಪ್ರತಿವಾದಿಯ ಖಾತೆಗೆ ಜಮಾ ಮಾಡಿರುತ್ತೇನೋ ಅಥವಾ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಪ್ರತಿವಾದಿಯ ಖಾತೆಗೆ ಜಮಾ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

17. ಪಿ.ಡಬ್ಲ್ಯೂ1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಪಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲನ್ನು ತನ್ನ ಮತ್ತು ಪ್ರತಿವಾದಿಯು ಮಧ್ಯೆ ಈ ದಾವೆಯಲ್ಲಿ ಹೇಳಿರುವ ಹಣದ ವ್ಯವಹಾರವನ್ನು ಹೊರತುಪಡಿಸಿ ಇನ್ನೊಂದು ಹಣದ ವ್ಯವಹಾರವು ಆಗಿರುತ್ತದೆ. ಸದರಿ ತನ್ನ ಮತ್ತು ಪ್ರತಿವಾದಿಯ ಮಧ್ಯೆ ಆದ ಇನ್ನೊಂದು ಹಣದ ವ್ಯವಹಾರವು 2 ಲಕ್ಷ ಹಣದ ಕುರಿತು ಆಗಿರುತ್ತದೆ, ಪ್ರತಿವಾದಿಯು ದಿನಾಂಕಃ10.02.2020 ರಂದು ತನ್ನಿಂದ 2 ಲಕ್ಷ ರೂಪಾಯಿ ಹಣವನ್ನು ಪಡೆದಿರುತ್ತಾನೆ, ಪ್ರತಿವಾದಿಯು ದಿನಾಂಕಃ 11.11.2020 ರಂದು ಸದರಿ ರೂ.2 ಲಕ್ಷ ರೂಪಾಯಿ ಹಣವನ್ನು ತನಗೆ ಮರು ಪಾವತಿಸಿರುತ್ತಾನೆ, ತನ್ನ ಗಂಡನು ಐ.ಟಿ. ಕಂಪನಿಯಲ್ಲಿ ಕೆಲಸ ಮಾಡುತ್ತಾನೆ. ದಿನಾಂಕಃ 20.02.2021 ರಂದು ತನ್ನ ಖಾತೆಯಲ್ಲಿ 3 ಲಕ್ಷ ರೂಪಾಯಿ ಹಣ ಇರಲಿಲ್ಲ. ನಿಪಿ-1 ರ ಚೆಕ್ಕು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿಗೆ ಸಂಬಂಧಿಸಿದ್ದು, ತಾನು ತನ್ನ ಖಾತೆಯಿಂದ ಪ್ರತಿವಾದಿಯ ಖಾತೆಗೆ ಒಂದೇ ಬಾರಿ ರೂ.3 ಲಕ್ಷ ರೂಪಾಯಿ ಹಣವನ್ನು

ವರ್ಗಾವಣೆ ಮಾಡಿರುವ ಬಗ್ಗೆ ತನಗೆ ನೆನಪಿರುತ್ತದೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡು ಬರುತ್ತದೆ.

18. ಪಿ.ಡಬ್ಲ್ಯೂ2 ರವರು ತಮ್ಮ ಪಾಟೀ ಸವಾಲಿನಲ್ಲಿ ಪ್ರತಿವಾದಿಯು ತನಗೆ 6 ವರ್ಷಗಳಿಂದ ಪರಿಚಯವಿರುತ್ತಾರೆ. ಸದರಿ ಗುರುರಾಜ್ ಬಾದಾಮಿರವರು ಸ್ಟಾಕ್ ಗೆ ಸಂಬಂಧಿಸಿದಂತೆ ವ್ಯವಹಾರವನ್ನು ಮಾಡುತ್ತಾರೆ. ತಾನು ಸ್ಟಾಕ್ ಮ್ಯೂಚಲ್ ಪಂಡ್ ನಲ್ಲಿ ಯಾವುದೇ ಹಣವನ್ನು ಹೂಡಿಕೆ ಮಾಡಿರುವುದಿಲ್ಲ. ತನ್ನ ಹೆಂಡತಿಯು 2020 ನೇ ಸಾಲಿನ ಪೆಬ್ರುವರಿ ತಿಂಗಳಿನಲ್ಲಿ ಪ್ರತಿವಾದಿಗೆ 2 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದರು ಮತ್ತು ಸದರಿ ಹಣವನ್ನು ಪ್ರತಿವಾದಿಯು ತನ್ನ ಹೆಂಡತಿಗೆ 2020 ನೇ ಇಸವಿಯಲ್ಲಿ 2 ಲಕ್ಷ ರೂಪಾಯಿ ಹಣವನ್ನು ಮರು ಪಾವತಿಸಿರುತ್ತಾರೆ. 2020 ನೇ ಇಸವಿಯಲ್ಲಿ ಪ್ರತಿವಾದಿಯು ನಿಮಗೆ ಹಣವನ್ನು ಕೇಳಿದ್ದರೂ ಕೂಡ ಏಕೆ ನಿಮ್ಮ ಹೆಂಡತಿಯ ಖಾತೆಯಿಂದ ಹಣವನ್ನು ಪ್ರತಿವಾದಿಗೆ ವರ್ಗಾಯಿಸಿರುತ್ತೀರ ಎಂಬ ಪ್ರಶ್ನೆಗೆ ಸಾಕ್ಷಿಯು ತನ್ನ ಖಾತೆಯಲ್ಲಿ ಹಣ ಇಲ್ಲದೇ ಇರುವುದರಿಂದ ತನ್ನ ಹೆಂಡತಿಯ ಖಾತೆಯಲ್ಲಿ ಹಣ ಇರುವುದರಿಂದ ತನ್ನ ಹೆಂಡತಿಯ ಖಾತೆಯಿಂದ ಪ್ರತಿವಾದಿಯ ಖಾತೆಗೆ ಹಣವನ್ನು ವರ್ಗಾಯಿಸಿರುತ್ತೇವೆ. 2020 ನೇ ಸಾಲಿನಲ್ಲಿ ಪ್ರತಿವಾದಿಗೆ ತನ್ನ ಹೆಂಡತಿಯು ಹಣವನ್ನು ಕೊಡುವ ಸಮಯದಲ್ಲಿ ಯಾವುದೇ ದಾಖಲಾತಿಯನ್ನು ಪ್ರತಿವಾದಿಯಿಂದ ಬರೆಸಿಕೊಂಡಿರುವುದಿಲ್ಲ. ಈ ದಾವೆಯಲ್ಲಿ ನಮೂದಿಸಿರುವ 3 ಲಕ್ಷ ರೂಪಾಯಿ ಹಣವನ್ನು ಪ್ರತಿವಾದಿಯು ತನಗೆ ನೇರವಾಗಿ ಪೋನ್ ಮುಖಾಂತರ ಕೇಳಿರುತ್ತಾರೆ. ತನಗೆ ಪ್ರತಿವಾದಿಯು ಹಣವನ್ನು ಕೇಳಿದ ನಂತರ ತಾನು ತನ್ನ ಹೆಂಡತಿಯ ಆನ್‌ಲೈನ್ ಖಾತೆಯಲ್ಲಿ ಬೆನಿಪಿಶಿಯರಿ ಆಗಿ ಪ್ರತಿವಾದಿಯ ಹೆಸರು ನಮೂದು ಆಗಿರುವುದರಿಂದ ತಾನು ತನ್ನ ಹೆಂಡತಿಯ ಖಾತೆಯಿಂದ ಪ್ರತಿವಾದಿಗೆ ಹಣವನ್ನು ವರ್ಗಾಯಿಸಿರುತ್ತೇನೆ. ಸಾಮಾನ್ಯವಾಗಿ ಯಾವುದೇ ಆನ್ ಲೈನ್ ಖಾತೆಯಲ್ಲಿ ಯಾವುದೇ ಒಬ್ಬ ವ್ಯಕ್ತಿಯ ಹೆಸರನ್ನು ಬೆನಿಪಿಶಿಯರಿ ಆಗಿ ಸೇರಿಸಲು 15 ರಿಂದ 20 ನಿಮಿಷ ಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಖಾತೆಯು ಆಕ್ಟಿವೇಶನ್ ಆಗಲು 24 ಗಂಟೆಗಳು ಬೇಕಾಗುತ್ತದೆ ಎಂದು

ಹೇಳುತ್ತಾರೆ. ದಿನಾಂಕಃ 20.02.2021 ರಂದು ತನ್ನ ಹೆಂಡತಿಯ ಖಾತೆಯಿಂದ ಪ್ರತಿವಾದಿಯ ಖಾತೆಗೆ ರೂ.3 ಲಕ್ಷ ರೂಪಾಯಿ ಹಣವನ್ನು ತನ್ನ ಹೆಂಡತಿಯು ವರ್ಗಾಯಿಸಿರುತ್ತಾರೆ. ತನ್ನ ಹೆಂಡತಿಯು ಪ್ರತಿವಾದಿಯ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿರುವ ಖಾತೆಗೆ ಹಣವನ್ನು ವರ್ಗಾಯಿಸಿರುತ್ತಾರೆಯೇ ಎಂಬ ಪ್ರಶ್ನೇಗೆ ಸಾಕ್ಷಿಯು ಪ್ರತಿವಾದಿಯು ಯಾವ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ .

19. ಪಿ.ಡಬ್ಲ್ಯೂ.2 ಪಾಟೀ ಸವಾಲನ್ನು ಪರಿಶೀಲಿಸಿದಾಗ ಪ್ರತಿವಾದಿಯು ತನಗೆ ಪರಿಚಯವಿರುತ್ತಾರೆ, ಸದರಿ ಗುರುರಾಜ್ ಬಾದಾಮಿರವರು ಸ್ಟಾಕ್ ಗೆ ಸಂಬಂಧಿಸಿದಂತೆ ವ್ಯವಹಾರವನ್ನು ಮಾಡುತ್ತಾರೆ, ತಾನು ಸ್ಟಾಕ್ ಮ್ಯೂಚಲ್ ಪಂಡ್ ನಲ್ಲಿ ಯಾವುದೇ ಹಣವನ್ನು ಹೂಡಿಕೆ ಮಾಡಿರುವುದಿಲ್ಲ, ತನ್ನ ಹೆಂಡತಿಯು 2020 ನೇ ಸಾಲಿನ ಪೆಬ್ರುವರಿ ತಿಂಗಳಿನಲ್ಲಿ ಪ್ರತಿವಾದಿಗೆ 2 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದರು ಮತ್ತು ಸದರಿ ಹಣವನ್ನು ಪ್ರತಿವಾದಿಯು ತನ್ನ ಹೆಂಡತಿಗೆ 2020 ನೇ ಇಸವಿಯಲ್ಲಿ 2 ಲಕ್ಷ ರೂಪಾಯಿ ಹಣವನ್ನು ಮರು ಪಾವತಿಸಿರುತ್ತಾರೆ. ಸಾಕ್ಷಿಯು ತನ್ನ ಖಾತೆಯಲ್ಲಿ ಹಣ ಇಲ್ಲದೇ ಇರುವುದರಿಂದ ತನ್ನ ಹೆಂಡತಿಯ ಖಾತೆಯಲ್ಲಿ ಹಣ ಇರುವುದರಿಂದ ತನ್ನ ಹೆಂಡತಿಯ ಖಾತೆಯಿಂದ ಪ್ರತಿವಾದಿಯ ಖಾತೆಗೆ ಹಣವನ್ನು ವರ್ಗಾಯಿಸಿರುತ್ತೇವೆ, ಈ ದಾವೆಯಲ್ಲಿ ನಮೂದಿಸಿರುವ 3 ಲಕ್ಷ ರೂಪಾಯಿ ಹಣವನ್ನು ಪ್ರತಿವಾದಿಯು ತನಗೆ ನೇರವಾಗಿ ಪೋನ್ ಮುಖಾಂತರ ಕೇಳಿರುತ್ತಾರೆ, ತನಗೆ ಪ್ರತಿವಾದಿಯು ಹಣವನ್ನು ಕೇಳಿದ ನಂತರ ತಾನು ತನ್ನ ಹೆಂಡತಿಯ ಆನ್‌ಲೈನ್ ಖಾತೆಯಲ್ಲಿ ಬೆನಿಫಿಶಿಯರಿ ಆಗಿ ಪ್ರತಿವಾದಿಯ ಹೆಸರು ನಮೂದು ಆಗಿರುವುದರಿಂದ ತಾನು ತನ್ನ ಹೆಂಡತಿಯ ಖಾತೆಯಿಂದ ಪ್ರತಿವಾದಿಗೆ ಹಣವನ್ನು ವರ್ಗಾಯಿಸಿರುತ್ತೇನೆ, ದಿನಾಂಕಃ20.02.2021 ರಂದು ತನ್ನ ಹೆಂಡತಿಯ ಖಾತೆಯಿಂದ ಪ್ರತಿವಾದಿಯ ಖಾತೆಗೆ 3 ಲಕ್ಷ ರೂಪಾಯಿ ಹಣವನ್ನು ತನ್ನ ಹೆಂಡತಿಯು ವರ್ಗಾಯಿಸಿರುತ್ತಾರೆ ಎಂದು ಒಪ್ಪಿತ ಹೇಳಿಕೆಯನ್ನು ನುದಿರುವುದು ಕಂಡು ಬರುತ್ತದೆ.

20. ಈ ಮೇಲಿನ ಪಿ.ಡಬ್ಲ್ಯೂ 1 ಮತ್ತು 2 ರವರ ಪಾಟೀ ಸವಾಲುಗಳನ್ನು ಪರಿಶೀಲಿಸಿದಾಗ ಪಿ.ಡಬ್ಲ್ಯೂ-1 ಮತ್ತು 2 ರವರು ತಮ್ಮ ಸಾಕ್ಷ್ಯದಲ್ಲಿ ಪ್ರತಿವಾದಿಯು ತಮಗೆ ಪರಿಚಯ ಇರುವ ಬಗ್ಗೆ, ದಿನಾಂಕ:10.02.2020 ರಂದು ಪ್ರತಿವಾದಿಯು ವಾದಿಯಿಂದ ರೂ.2 ಲಕ್ಷ ರೂಪಾಯಿ ಹಣವನ್ನು ಪಡೆದಿರುತ್ತಾರೆ, ಸದರಿ ಹಣವನ್ನು ಪ್ರತಿವಾದಿಯು ವಾದಿಗೆ ಮರು ಪಾವತಿಸಿರುತ್ತಾರೆ. ವಾದಿಯು ಪ್ರತಿವಾದಿಯ ಖಾತೆಗೆ ದಿನಾಂಕ:22.02.2021 ರಂದು ರೂ.3 ಲಕ್ಷ ಹಣವನ್ನು ನೆಫ್ಟ್ ಮೂಲಕ ವರ್ಗಾಯಿಸಿರುವ ಕುರಿತು ಒಪ್ಪಿತ ಹೇಳಿಕೆಯನ್ನು ನುಡಿದಿರುತ್ತಾರೆ. ವಾದಿಯ ಪ್ರಕಾರ ದಿನಾಂಕ:10.02.2020 ರಂದು ಆದ ವ್ಯವಹಾರ ಹಾಗೂ ದಿನಾಂಕ:22.02.2021 ರಂದು ವಾದಿ ಹಾಗೂ ಪ್ರತಿವಾದಿಯ ಮಧ್ಯ ಆದ ವ್ಯವಹಾರವೇ ಬೇರೆ ಎಂಬುದಾಗಿರುತ್ತದೆ.

21. ಡಿ.ಡಬ್ಲ್ಯೂ 1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಡಿ.ಡಬ್ಲ್ಯೂ 1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ತನ್ನ ಹತ್ತಿರ ಇರುವ ಹಳೇ ಚೆಕ್ಕುಗಳು ಯುನೈಟೆಡ್ ಬ್ಯಾಂಕ್ ಮರ್ಜ್ ಆದ ನಂತರ ಪಂಜಾಬ್ ಬ್ಯಾಂಕಿಗೆ ತಾನು ಸೆರೆಂಡರ್ ಮಾಡಿರುವುದಿಲ್ಲ. ತನ್ನ ತಮ್ಮ ಬಿ.ಎಸ್.ಸಿ. ಪದವೀಧರನಾಗಿರುತ್ತಾನೆ. ತನ್ನ ತಮ್ಮನು ಟ್ರೆಡಿಂಗ್ ಕೆಲಸವನ್ನು ಮಾಡುತ್ತಾನೆ. ತನ್ನ ತಮ್ಮನ ವಾರ್ಷಿಕ ಆದಾಯ ತನಗೆ ಗೊತ್ತಿಲ್ಲ. ತನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವಾದಿಯ ಗಂಡ ಮತ್ತು ತನ್ನ ತಮ್ಮನ ನಡುವೆ ಯಾವ ವ್ಯವಹಾರ ಇತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿ:22-02-2021 ರಂದು ವಾದಿಯು ತನ್ನ ಖಾತೆಗೆ ರೂ.3 ಲಕ್ಷ ಹಣವನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ತಾನು ವಾದಿಯ ಹತ್ತಿರ ಹಣವನ್ನು ಸಾಲವಾಗಿ ಕೇಳಿದ್ದರಿಂದ ವಾದಿಯು ತನ್ನ ಖಾತೆಗೆ ರೂ.3 ಲಕ್ಷ ಹಣವನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತಾನು ವಾದಿಯ ಹತ್ತಿರ ಯಾವುದೇ ಸಾಲವನ್ನು ಕೇಳಿರುವುದಿಲ್ಲ ಎಂದು ಹೇಳುತ್ತಾರೆ. ತನ್ನ ತಮ್ಮನ ಕೋರಿಕೆಯ ಮೇರೆಗೆ ವಾದಿಯು ತನ್ನ ಖಾತೆಗೆ 3 ಲಕ್ಷ ಹಣವನ್ನು ವರ್ಗಾವಣೆ ಮಾಡಿರುತ್ತಾರೆ. ವಾದಿಯು ಯಾವ ಬಾಬ್ತು ತನ್ನ ತಮ್ಮನಿಗೆ ಸಂಬಂಧಿಸಿದ ಹಣವನ್ನು ತನ್ನ ಖಾತೆಗೆ

ವರ್ಗಾಯಿಸಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ. ತನ್ನ ತಮ್ಮನು ಸ್ಟಾಕ್ ಮಾರ್ಕೆಟ್ ನಲ್ಲಿ ಷೇರಿಗ್ ಬ್ಯೂಸಿನೆಸ್ ಅನ್ನು ಮಾಡುತ್ತಾರೆ. ವಾದಿಯಾಗಲಿ ಅಥವಾ ವಾದಿಯ ಗಂಡನಾಗಲಿ 3 ಲಕ್ಷ ಹಣವನ್ನು ತಮ್ಮ ತಮ್ಮನಿಗೆ ಕೊಡುವಂತೆ ಯಾವುದೇ ಲಿಖಿತವಾದ ದಾಖಲಾತಿಯ ಮೂಲಕ ತನಗೆ ಹೇಳಿರುವುದಿಲ್ಲ ಎಂದು ನುಡಿದಿರುತ್ತಾರೆ.

22. ಈ ಮೇಲಿನ ಡಿ.ಡಬ್ಲ್ಯೂ 1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಡಿ.ಡಬ್ಲ್ಯೂ 1 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ತಮ್ಮ ಬಿ.ಎಸ್ಸಿ ಪದವೀಧರನಾಗಿರುತ್ತಾನೆ, ತನ್ನ ತಮ್ಮನ್ನು ಟ್ರೇಡಿಂಗ್ ಕೆಲಸ ಮಾಡುತ್ತಾನೆ, ತನ್ನ ತಮ್ಮನ ವಾರ್ಷಿಕ ಆದಾಯ ತನಗೆ ಗೊತ್ತಿಲ್ಲ, ದಿನಾಂಕ:22.02.2021 ರಂದು ವಾದಿಯು ತನ್ನ ಖಾತೆಗೆ ರೂ.3 ಲಕ್ಷ ಹಣವನ್ನು ವರ್ಗಾವಣೆ ಮಾಡಿರುತ್ತಾರೆ, ತನ್ನ ತಮ್ಮನ ಕೋರಿಕೆಯ ಮೇರೆಗೆ ವಾದಿಯು ತನ್ನ ಖಾತೆಗೆ ರೂ.3 ಲಕ್ಷ ಹಣವನ್ನು ವರ್ಗಾವಣೆ ಮಾಡಿರುತ್ತಾರೆ, ವಾದಿಯ ಯಾವ ಬಾಬ್ತು ತನ್ನ ತಮ್ಮನಿಗೆ ಸಂಬಂಧಿಸಿದ ಹಣವನ್ನು ತನ್ನ ಖಾತೆಗೆ ವರ್ಗಾಯಿಸಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ, ತನ್ನ ತಮ್ಮನ್ನು ಸ್ಟಾಕ್ ಮಾರ್ಕೆಟ್ ನಲ್ಲಿ ಷೇರಿಂಗ್ ಬಿಸಿನೆಸ್ ಮಾಡುತ್ತಾನೆ ಹಾಗೂ ವಾದಿಯಾಗಲೀ ಅಥವಾ ವಾದಿಯ ಗಂಡನಾಗಲೀ ರೂ. 3 ಹಣವನ್ನು ತಮ್ಮ ತಮ್ಮನಿಗೆ ಕೊಡುವಂತೆ ಯಾವುದೇ ಲಿಖಿತ ದಾಖಾತಿಯ ಮೂಲಕ ಹೇಳಿರುವುದಿಲ್ಲ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡು ಬರುತ್ತದೆ.

23. ಈ ಮೇಲಿನ ಡಿ.ಡಬ್ಲ್ಯೂ1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಪ್ರತಿವಾದಿಯು ವಾದಿಯಿಂದ ರೂ.3 ಲಕ್ಷ ಹಣವನ್ನು ದಿನಾಂಕ:22.02.2021 ರಂದು ಪಡೆದಿರುವ ಕುರಿತು ಮತ್ತು ಸದರಿ ಹಣದ ಮರು ಪಾವತಿಗಾಗಿ ನಿಶಾನೆ ಪಿ. 1 ರ ಚೆಕ್ಕನ್ನು ವಾದಿಗೆ ಕೊಟ್ಟಿರುವ ಬಗ್ಗೆ ನಿರ್ಧಿಷ್ಟವಾಗಿ ಪ್ರತಿವಾದಿಯು ಅಲ್ಲಗಳೆದಿರುತ್ತಾರೆ. ಆದರೆ ನಿಶಾನೆ. ಪಿ.1 ರ ಚೆಕ್ಕಿನಲ್ಲಿರುವ ಸಹಿ ತನ್ನದು ಮತ್ತು ಸದರಿ ನಿಶಾನೆ ಪಿ.1 ರ ಚೆಕ್ಕು ತನ್ನ ಖಾತೆಗೆ ಸಂಬಂಧಿಸಿರುತ್ತದೆ ಎಂಬುದರ ಕುರಿತು ಒಪ್ಪಿಕೊಂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದರೆ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ನಿ.ಪಿ.1 ರ ಚೆಕ್ಕನ್ನು

ವಾದಿಯಿಂದ ಪ್ರತಿವಾದಿಯು ಮೊದಲ ಬಾರಿಗೆ ಹಣವನ್ನು ಪಡೆದಾಗ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣವನ್ನು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರೆ.

24. ವಾದಿಯು ತನ್ನ ವಾದಪತ್ರದಲ್ಲಿ ಪ್ರತಿವಾದಿಯು ನಿ.ಪಿ.1 ರ ಚೆಕ್ಕನು ಕೊಟ್ಟಿರುತ್ತಾರೆ ಎಂದು ನಿರ್ಧಿಷ್ಟವಾಗಿ ಹೇಳಿರುತ್ತಾರೆ. ಈ ಕುರಿತು ಪಿ.ಡಬ್ಲ್ಯೂ1 ಮತ್ತು 2 ರವರು ಸಹ ತಮ್ಮ ಸಾಕ್ಷ್ಯಗಳಲ್ಲಿ ನಿರ್ಧಿಷ್ಟವಾಗಿ ಪ್ರತಿವಾದಿಯು ರೂ.3 ಲಕ್ಷ ಹಣವನ್ನು ವಾದಿಯಿಂದ ಪಡೆದಿರುವ ಬಗ್ಗೆ ಮತ್ತು ಸದರಿ ಹಣದ ಮರು ಪಾವತಿಗಾಗಿ ನಿ.ಪಿ.1 ರ ಚೆಕ್ಕನ್ನು ಕೊಟ್ಟಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರತಿವಾದಿಯು ವಾದಿಯಿಂದ ದಿನಾಂಕ:22.02.2021 ರಂದು ಹಣವನ್ನು ನೆಫ್ಟ್ ಮೂಲಕ ಹಣವನ್ನು ಪಡೆದಿರುವುದನ್ನು ಒಪ್ಪಿಕೊಂಡಿರುತ್ತಾರೆ. ಈ ಕುರಿತು ವಾದಿಯು ಹಾಜರು ಪಡಿಸಿರುವ ನಿಶಾನೆ ಪಿ.6 ರ ವಾದಿಯ ಅಕೌಂಟ್ ಎಕ್ಸ್‌ಟ್ರ್ಯಾಕ್ಟ್ ಪರಿಶೀಲಿದಾಗ ದಿ:22.02.2021 ರಂದು ರೂ.3 ಲಕ್ಷ ಹಣವು ವಾದಿಯ ಖಾತೆಯಿಂದ ಪ್ರತಿವಾದಿಯ ಖಾತೆಗೆ ವರ್ಗಾವಣೆ ಆಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಿಯು ದಿನಾಂಕ:22.02.2021 ರಂದು ತನ್ನ ಖಾತೆಗೆ ವರ್ಗಾವಣೆ ಮಾಡಿರುವ ರೂ.3 ಲಕ್ಷ ಹಣವನ್ನು ತನ್ನ ತಮ್ಮನಿಗೆ ವಾದಿಯು ಕೊಡಬೇಕಾದ ಹಣವನ್ನು ತನ್ನ ಖಾತೆಗೆ ವರ್ಗಾಯಿಸಿರುತ್ತಾರೆ ಎಂದು ಹೇಳಿರುತ್ತಾರೆ.

25. ಪ್ರತಿವಾದಿಯು ವಾದಿಗೆ ದಿನಾಂಕ:10.02.2020 ರಂದು ಪಡೆದ ಹಣವನ್ನು ದಿನಾಂಕ:11.02.2020 ರಂದು ಮರು ಪಾವತಿಸಿದ ನಂತರವೂ ನಿ.ಪಿ.1 ರ ಚೆಕ್ಕನ್ನು ಮರಳಿ ಕೊಡದೇ ಇದ್ದರೂ ಕೂಡ ವಾದಿಯು ಸೃಷ್ಟಿಸಿದ ನಿ.ಪಿ.1 ರ ಚೆಕ್ಕಿನ ಕುರಿತು ಪ್ರತಿವಾದಿಯು ವಾದಿಯ ವಿರುದ್ಧ ಯಾವುದೇ ಕಾನೂನು ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಒಂದು ವೇಳೆ ವಾದಿಯು ನಿ.ಪಿ.1 ರ ದಾಖಲಾತಿಯನ್ನು ನಿಜವಾಗಿಯೂ ಸೃಷ್ಟಿಸಿದ್ದರೆ ಹಾಗೂ ಮರಳಿ ಕೊಡದಿದ್ದಾಗ ವಾದಿಯ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಏನು ತೊಂದರೆ ಇತ್ತು ಎಂಬುದರ ಕುರಿತು

ಪ್ರತಿವಾದಿಯು ಯಾವುದೇ ಕಾರಣಗಳನ್ನು ನೀಡಿರುವುದಿಲ್ಲ. ಅದೇ ರೀತಿಯಾಗಿ ಪ್ರತಿವಾದಿಯ ತಮ್ಮನು ಷೇರು ಮಾರ್ಕೆಟಿಂಗ್ ವ್ಯವಹಾರ ಮಾಡುತ್ತಿದ್ದರೂ ಸಹ ವಾದಿಯು ಪ್ರತಿವಾದಿಯ ಸಹೋದರನ ಖಾತೆಗೆ ಹಣವನ್ನು ಹಾಕದೇ ಪ್ರತಿವಾದಿಯ ಖಾತೆಗೆ ಏಕೆ ಹಣವನ್ನು ವರ್ಗಾಯಿಸಿರುತ್ತಾರೆ ಎಂಬುದರ ಕುರಿತು ಪ್ರತಿವಾದಿಯು ಯಾವುದೇ ಕಾರಣಗಳನ್ನು ನೀಡಿರುವುದಿಲ್ಲ.

26. ಈ ಕುರಿತು ಪ್ರತಿವಾದಿಯು ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ಸಹ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯು ಕೇವಲ ತಮ್ಮ ಮೌಖಿಕ ಸಾಕ್ಷ್ಯದಲ್ಲಿ ಮಾತ್ರ ವಾದಿಯಿಂದ ರೂ.3 ಹಣವನ್ನು ತನ್ನ ಸಹೋದರನ ಬಾಬ್ತು ಪಡೆದಿರುತ್ತಾರೆ ಮತ್ತು ನಿಶಾನೆ.ಪಿ.1 ರ ಚೆಕ್ಕನ್ನು ತಾನು ವಾದಿಯಿಂದ ಮೊದಲು ಪಡೆದಿರುವ ಹಣದ ಭದ್ರತೆಗಾಗಿ ವಾದಿಗೆ ನಿಶಾನೆ.ಪಿ.1 ರ ಚೆಕ್ಕನ್ನು ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ. ಸಿವಿಲ್ ದಾವೆಗಳಲ್ಲಿ ಮೌಖಿಕ ಸಾಕ್ಷ್ಯಕ್ಕಿಂತ ದಾಖಲಾತಿ ಸಾಕ್ಷ್ಯವು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಈ ದಾವೆಯಲ್ಲಿ ವಾದಿಯು ನಿ.ಪಿ.1 ಮತ್ತು 6 ರಂತೆ ದಾಖಲಾತಿ ಸಾಕ್ಷ್ಯವನ್ನು ಹಾಜರುಪಡಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯು ನಿ.ಪಿ.1 ಮತ್ತು 6 ರ ದಾಖಲಾತಿಗಳನ್ನು ಖಂಡಿಸುವಂತಹ ಯಾವುದೇ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ಪ್ರತಿವಾದಿಯು ವಾದಿಯಿಂದ ರೂ.3 ಲಕ್ಷ ಹಣವನ್ನು ಸಾಲವಾಗಿ ಪಡೆದು ಸದರಿ ಹಣದ ಮರುಪಾವತಿಗಾಗಿ ನಿ.ಪಿ.1 ರ ಚೆಕ್ಕನ್ನು ವಾದಿಗೆ ಕೊಟ್ಟಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

27. ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮದ ಅಡಿ ಲಿಖಿತ ವರ್ಗಾವಣೀಯ ದಾಖಲಾತಿಗಳಿಗೆ ಸಂಬಂಧಿಸಿದಂತೆ ಖಂಡಿಸಬಹುದಾದ ಸಾಕ್ಷ್ಯಗಳನ್ನು ಒದಗಿಸದ ಹೊರತು ಕಾನೂನಿನ ಅಡಿಯಲ್ಲಿ ಲಿಖಿತ ವರ್ಗಾಣೆಯಲ್ಲಿ ನಮೂದಿಸಿರುವ ಪ್ರತಿಫಲ, ದಿನಾಂಕ, ಸಮಯ ಮತ್ತು

ಮುಂತಾದವುಗಳ ಬಗ್ಗೆ ಧಾರಕನ ಪರವಾಗಿ ಪೂರ್ವಭಾನೆಯನ್ನು ಹೊಂದಬಹುದಾಗಿರುತ್ತದೆ. ಸದರಿ ಪೂರ್ವಭಾವನೆಯನ್ನು ಖಂಡಿಸುವಂತಹ ಸಾಕ್ಷ್ಯವನ್ನು ಪ್ರತಿವಾದಿಯು ಹಾಜರುಪಡಿಸಿದರಷ್ಟೇ ಅದನ್ನು ಸಾಭೀತುಪಡಿಸುವ ಹೊಣೆಗಾರಿಕೆ ವಾದಿಯ ಮೇಲೆ ವರ್ಗಾವಣೆಗೊಳ್ಳುತ್ತದೆ. ಈ ಹಂತದಲ್ಲಿ ಲಿಖಿತ ವರ್ಗಾವಣೆ ಅಧಿನಿಯಮ ಕಲಂ.**118** ರಡಿಯಲ್ಲಿ ಈ ಕೆಳಕಂಡಂತೆ ಉಲ್ಲೇಖವಿರುತ್ತದೆ.

> **118. Presumptions as to negotiable instruments.-** Until the contrary is proved, the following presumptions shall be made:
>
> (a) **of consideration.-**that every negotiable instrument was made or drawn for consideration, and that every such instrument when it has been accepted,endorsed, negotiated or transferred for consideration;
>
> b. **as to date.-**that every negotiable instrument bearing a date was made or drawn on such date;
>
> c. **as to time of acceptance.-**that every accepted bill of exchange was accepted within a reasonable time after its date and before its maturity;
>
> d. **as to time transfer.-**that every transfer of a negotiable instrument was made before its maturity;
>
> e. **as to order of endorsement.-**that the endorsements appearing upon a negotiable instrument were made in the order in which they appear thereon;
>
> f. **as to stamp.-**that a lost promissory note, bill of exchange or cheque was duly stamped;
>
> g. **that holder is a holder in due course.-**that the holder of a negotiable instrument is a holder in due course:

Provided that, where the instrument has been contained from its lawful owner, or from any person in lawful custody thereof, by means of an offence of fraud, or has been obtained from the maker or acceptor thereof by means of an offence or fraud or for unalwful consideration,the burden of proving that the holder is a holder in due course lies upon him. SCC

28. ಈ ಮೇಲ್ಕಂಡ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸಿದಾಗ, ವರ್ಗಾವಣೆಯ ಲಿಖಿತ ಪತ್ರಗಳ ಅಧಿನಿಯ ಕಲಂ 118 ರ ಚೆಕ್ಕನ್ನು ಸಲ್ಲಿಸಿರುವ ಧಾರಕನ ಬಗ್ಗೆ ಇರುವ ಪೂರ್ವ ಭಾವನೆಗಳ ಬಗ್ಗೆ ಉಲ್ಲೇಖಿಸಿರುತ್ತಾರೆ. ವರ್ಗಾವಣೇಯ ಲಿಖಿತಪತ್ರಗಳ ಅಧಿನಿಯಮ ಕಲಂ 118 ರಂತೆ ಯಾವುದೇ ಒಂದು ಲಿಖಿತ ವರ್ಗಾವಣೆಯ ದಾಖಲೆಯಲ್ಲಿ ನಮೂದಿಸಿದ ಹಣದ ಮೊತ್ತ, ದಿನಾಂಕ, ಸ್ವೀಕರಿಸುವಿಕೆ ಇತ್ಯಾದಿಗಳ ಬಗ್ಗೆ ಧಾರಕ/ವಾದಿಯ ಪರವಾಗಿ ಪೂರ್ವ ಭಾವನೆ ಹೊಂದಬಹುದು ಎಂದು ತಿಳಿಸಲಾಗಿರುತ್ತದೆ. ಈ ಅಂಶಗಳ ಬಗ್ಗೆ ವಾದಿಯ ಪರವಾಗಿರುವ ಪೂರ್ವ ಭಾವನೆ ತೊಡೆದು ಹಾಕಲು ಪ್ರತಿವಾದಿಯು ಖಂಡಿಸಬಹುದಾದ ಅಂಶಗಳನ್ನು ಸಾಭೀತುಪಡಿಸಿದರೆ ಮಾತ್ರ ವಾದಿಯ ಮೇಲೆ ರುಜುವಾತಿನ ಭಾರ ಮರು ವರ್ಗಾವಣೆಯಾಗುತ್ತದೆ ಮತ್ತು ಆಗ ವಾದಿಯು ರುಜುವಾತುಪಡಿಸಲು ವಿಫಲನಾದರೆ ಮಾತ್ರ ತನ್ನ ಪರಿಹಾರವನ್ನು ಪಡೆಯಲು ವಿಫಲನಾಗುತ್ತಾನೆ.

29. ಇದಕ್ಕೆ ಪೂರಕವಾಗಿ ಈ ನ್ಯಾಯಾಲಯವು ಮಾನ್ಯ ಸರ್ವೋಚ್ಚ ನ್ಯಾಯಾಲಯವು (2008) 7 SCC 655 ರಲ್ಲಿ ನೀಡಿರುವ ತೀರ್ಪುಜನ್ಯವನ್ನು ಉಲ್ಲೇಖಿಸುತ್ತದೆ. ಸದರಿ ತೀರ್ಪುಜನ್ಯದಲ್ಲಿ ಈ ಕೆಳಕಂಡಂತೆ ಇರುತ್ತದೆ.

N.I.Act 1881 – S.118 (a) – Presumption of consideration – held, initial burden is on defendant to show that existence of consideration was improbable or

> doubtful or illegal. - If this burden is discharged, onus shifts on plaintiff – if, however, defendant fails to discharge initial burden, the plaintiff is invariably entitled to benefit of the presumption – mere denial of consideration is not sufficient to discharge the initial burden – something probable has to be brought on record to prove non-existence of consideration on facts, execution of pronote proved – respondents failed to discharge initial burden either by direct evidence or preponderance of probabilities – held, appellate entitled to benefit of presumption under Section 118(a).

30. ಮೇಲಿನ ತೀರ್ಪುಜನ್ಯವನ್ನು ಪರಿಶೀಲಿಸಿದಾಗ ಪ್ರತಿವಾದಿಯು ಪ್ರಾರಂಭಿಕವಾಗಿ ತನ್ನ ಮೇಲಿರುವ ರುಜುವಾತಿನ ಭಾರವನ್ನು ಸಾಭೀತುಪಡಿಸದ ಹೊರತು ವಾದಿಯು ಪೂರ್ವಭಾವನೆಯ ಲಾಭ ಹೊಂದಲು ಅರ್ಹನು ಎಂಬುದಾಗಿರುತ್ತದೆ. ಈ ದಾವೆಯಲ್ಲಿಯೂ ಸಹ ಪ್ರತಿವಾದಿಯು ತಾನು ತೆಗೆದುಕೊಂಡಿರುವ ಪ್ರತಿರಕ್ಷಣೆಗಳನ್ನು ಸಾಭೀತುಪಡಿಸುವಲ್ಲಿ ವಿಫಲವಾಗಿರುತ್ತಾನೆ. ಹಾಗಾಗಿ ಈ ಮೇಲಿನ ತೀರ್ಪುಜನ್ಯವು ಈ ದಾವೆಯ ವಸ್ತುಸ್ಥಿತಿಗೆ ಅನ್ವಯಿಸುತ್ತದೆ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

31. ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಕೇವಲ ಮೌಖಿಕವಾಗಿ ತಾನು ವಾದಿಯಿಂದ ಯಾವುದೇ ಹಣವನ್ನು ಪಡೆದು ನಿ.ಪಿ.1 ರ ಚೆಕ್ಕನ್ನು ಕೊಟ್ಟಿರುವುದಿಲ್ಲ ಎಂದು ಹೇಳಿದ್ದು, ನಿಜವಾಗಿಯು ವಾದಿಯು ನಿಶಾನೆ.ಪಿ.1 ರ ಚೆಕ್ಕನ್ನು ಸೃಷ್ಟಿಸಿದ್ದರೆ ಪ್ರತಿವಾದಿಯು ವಾದಿಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತಿದ್ದರೂ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ವಾದಿಯು ನಿ.ಪಿ.1 ರ ಚೆಕ್ಕನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಪ್ರತಿವಾದಿಯು ಸಾಭೀತುಪಡಿಸಲು ವಿಫಲರಾಗಿರುತ್ತಾರೆ ಎಂಬುದು ನ್ಯಾಯಾಲಯ ಅಭಿಪ್ರಾಯವಾಗಿರುತ್ತದೆ.

32. ಮಾನ್ಯ ಪ್ರತಿವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ಪ್ರತಿವಾದಿಯು ದಿನಾಂಕ 05-05-2022 ರಲ್ಲಿ ಯುನಿಟೆಡ್ ಬ್ಯಾಂಕಿನಲ್ಲಿ ಯಾವುದೇ ಖಾತೆಯನ್ನು ಹೊಂದಿರಲಿಲ್ಲ ಮತ್ತು ಸದರಿ ಸಮಯದಲ್ಲಿ ಯುನೈಟೆಡ್ ಬ್ಯಾಂಕವು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ವಿಲೀನಗೊಂಡಿರುತ್ತದೆ ಎಂದು ಆಧರಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ ಮಾನ್ಯ ವಾದಿ ಪರ ವಕೀಲರು ಪ್ರತಿವಾದಿ ಪರ ವಕೀಲರು ಮಾಡಿರುವ ವಾದವನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು ಪಿ.ಡಬ್ಲ್ಯೂ.1 ರಿಂದ 3 ರವರ ಪಾಟೀ ಸವಾಲಿನಲ್ಲಿ ಪ್ರಶ್ನೆಗಳನ್ನು ಕೇಳಿರುತ್ತಾರೆ. ಈ ಕುರಿತು ಉಭಯ ಪಕ್ಷಗಾರರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

33. ಪಿ.ಡಬ್ಲ್ಯೂ.1 ರವರ ತನ್ನ ಪಾಟೀ ಸವಾಲಿನಲ್ಲಿ ನಿಶಾನೆ.ಪಿ.1 ರ ಚೆಕ್ಕು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕವು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಮರ್ಜ್ ವು ಮಾರ್ಚ್ 2021 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತಾನು ತನ್ನ ಖಾತೆಯಿಂದ ಪ್ರತಿವಾದಿಯ ಖಾತೆಗೆ ಒಂದೇ ಬಾರಿ ರೂ.3 ಲಕ್ಷ ರೂಪಾಯಿ ಹಣವನ್ನು ವರ್ಗಾವಣೆ ಮಾಡಿರುವ ಬಗ್ಗೆ ತನಗೆ ನೆನಪಿರುತ್ತದೆ. ತಾನು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಲ್ಲಿ ಇರುವ ಪ್ರತಿವಾದಿಯ ಖಾತೆಗೆ ಜಮಾ ಮಾಡಿರುತ್ತೇನೋ ಅಥವಾ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಪ್ರತಿವಾದಿಯ ಖಾತೆಗೆ ಹಣವನ್ನು ಜಮಾ ಮಾಡಿರುತ್ತೇನೋ ಎಂಬುದರ ಬಗ್ಗೆ ತನಗೆ ನೆನಪಿರುವುದಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು ಪಿಡಬ್ಲ್ಯೂ-1 ರವರು ತನ್ನ ಪಾಟೀ ಸವಾಲಿನಲ್ಲಿ ದಿನಾಂಕ 22-02-2021 ರಂದು ಯುನೈಟೆಡ್ ಬ್ಯಾಂಕ್‌ವು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ವಿಲೀನಗೊಂಡಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯು ತನಗೆ ದಿನಾಂಕ 05.05.2022 ರಂದು ನಿಪಿ.1 ರ ಚೆಕ್ಕನ್ನು ಕೊಟ್ಟಿರುತ್ತಾನೆ. ದಿನಾಂಕ:05.05.2022 ರಂದು ಯುನೈಟೆಡ್ ಬ್ಯಾಂಕ್ ಇದ್ದದ್ದು ಪಂಜಾಬ್ ನ್ಯಾಷನಲ್ ಬಾಂಕಿನಲ್ಲಿ ವೀಲಿನ ಆಗಿತ್ತು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತಾನು ದಿನಾಂಕ:20.08.2022 ರಂದು ನಿಪಿ.-1 ರ ಚೆಕ್ಕನ್ನು ನಗಧೀಕರಣಕ್ಕಾಗಿ ಬ್ಯಾಂಕಿಗೆ

ಹಾಜರುಪಡಿಸಿರುತ್ತೇನೆ. ನಿಪಿ.1 ರ ಚೆಕ್ಕು ಯಾವ ಕಾರಣಕ್ಕಾಗಿ ಅಮಾನ್ಯಗೊಂಡಿರುತ್ತದೆ ಎಂಬುದು ತನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಂತರ ತಾನು ತಮ್ಮ ವಕೀಲರ ಮೂಲಕ ಕ್ರಮ ತೆಗೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ.1 ರ ಚೆಕ್ಕು ಯಾವ ಕಾರಣಕ್ಕಾಗಿ ಅಮಾನ್ಯಗೊಂಡಿರುತ್ತದೆ ಎಂಬುದರ ಕುರಿತು ಸರಿಯಾಗಿ ತಮಗೆ ಗೊತ್ತಿಲ್ಲದ ಕಾರಣ ತಮ್ಮ ವಕೀಲರನ್ನು ತಾನು ಭೇಟಿಯಾಗಿರುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ನಿಪಿ.-2 ರ ಹಿಂಬರಹದಲ್ಲಿ ನಮೂದಿಸಿರುವ ಕಾರಣವು ತಮಗೆ ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. ತಾನು ಮತ್ತು ತನ್ನ ಗಂಡ ಇಬ್ಬರು ಸೇರಿ ನಿಪಿ.2 ರ ಹಿಂಬರಹವನ್ನು ತಮ್ಮ ವಕೀಲರಿಗೆ ತೋರಿಸಿರುತ್ತೇನೆ. ತಮ್ಮ ವಕೀಲರು ತಮಗೆ ನಿಪಿ-2 ರ ಹಿಂಬರಹದಲ್ಲಿ ನಮೂದಿಸಿರುವ ಕಾರಣವು ಬ್ಯಾಂಕಿಗೆ ಸಂಬಂಧಿಸಿದ್ದು ಇರುವುದರಿಂದ ಪ್ರಕರಣವನ್ನು ದಾಖಲಿಸಬೇಕೆಂದು ತಿಳಿಸಿರುತ್ತಾರೆ. ತಾನು ನಿಪಿ-2 ರ ಹಿಂಬರಹವನ್ನು ತೋರಿಸಿರುವವರ ವಕೀಲರೇ ಈ ದಾವೆಯಲ್ಲಿ ಇರುವ ತಮ್ಮ ವಕೀಲರಾಗಿರುತ್ತಾರೆ ಎಂದು ನುಡಿದಿರುತ್ತಾರೆ.

34. ಪಿ.ಡಬ್ಲ್ಯೂ3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ:01.04.2020 ರಂದು ಯುನೈಟೆಡ್ ಬ್ಯಾಂಕವು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಮರ್ಜ್ ಆಗಿರುತ್ತದೆ. ಯುನೈಟೆಡ್ ಬ್ಯಾಂಕವು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಮರ್ಜ್ ಅದ ನಂತರ ಯುನೈಟೆಡ್ ಬ್ಯಾಂಕಿನಲ್ಲಿ ಇರುವ ಖಾತೆದಾರರ ಅಕೌಂಟ್ ನಂಬರ್ ಗಳಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. ದಿನಾಂಕ:01.04.2021 ರಂದು ಯುನೈಟೆಡ್ ಬ್ಯಾಂಕಿನ ಐ ಎಫ್ ಎಸ್ ಸಿ ಕೋಡ್ ಬದಲಾವಣೆಯಾಗಿರುತ್ತದೆ. ಯುನೈಟೆಡ್ ಬ್ಯಾಂಕವು ಮರ್ಜ್ ಆದ ನಂತರ ಸದರಿ ಬ್ಯಾಂಕಿನಲ್ಲಿರುವ ಖಾತೆದಾರರಿಗೆ ಮೆಸೇಜ್ ಮುಖಾಂತರ ಬ್ಯಾಂಕವು ಮರ್ಜ್ ಆದ ವಿಷಯವನ್ನು ಮತ್ತು ಹಳೇ ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ತಿಳಿಸಿರುತ್ತೇವೆ. ಪ್ರತಿವಾದಿಯು ಮೊದಲಿಗೆ ಯುನೈಟೆಡ್ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದು ತದನಂತರ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುತ್ತಾರೆ. ಯುನೈಟೆಡ್ ಬ್ಯಾಂಕವು ಮರ್ಜ್ ಆದ ನಂತರ ಸದರಿ ಬ್ಯಾಂಕಿನ

ಖಾತೆದಾರರು ಚೆಕ್ಕುಗಳನ್ನು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಹಾಜರುಪಡಿಸುವುದು ಕಡ್ಡಾಯವಾಗಿರುವುದಿಲ್ಲ. ದಿನಾಂಕ:22.09.2022 ರಂದು ಪ್ರತಿವಾದಿಯ ಖಾತೆಯಲ್ಲಿ ನಿ.ಪಿ-1 ರ ಚೆಕ್ಕಿನಲ್ಲಿ ನಮೂದಿಸಿರುವ ಮೊತ್ತವು ಇರಲಿಲ್ಲ ಎಂದು ನುಡಿದಿರುತ್ತಾರೆ.

35. ಪಿ.ಡಬ್ಲ್ಯೂ3 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 01-10-2021 ರಂದು ಯುನೈಟೆಡ್ ಬ್ಯಾಂಕಿನ ಚೆಕ್ಕುಗಳು ಅಮಾನ್ಯಗೊಂಡಿರುತ್ತವೆ (ಇನ್ ವ್ಯಾಲಿಡ್ ಆಗಿರುತ್ತದೆ) ದಿನಾಂಕ 01-10-2021 ರ ನಂತರ ಯುನೈಟೆಡ್ ಬ್ಯಾಂಕಿಗೆ ಸಂಬಂಧಿಸಿದ ಹಳೆಯ ಚೆಕ್ಕುಗಳನ್ನು ತಮ್ಮ ಬ್ಯಾಂಕಿಗೆ ಹಾಜರುಪಡಿಸಿದರೆ ಸದರಿ ಚೆಕ್ಕುಗಳಿಗೆ ("Refer to Drawer") ಎಂದು ಹಿಂಬರಹವನ್ನು ನೀಡುತ್ತೇವೆ. ಸಾಕ್ಷಿಗೆ ಒಂದು ಲೆಟರನ್ನು ತೋರಿಸಿ ಸದರಿ ಲೆಟರನ್ನು ಪ್ರತಿವಾದಿ ನಿಮ್ಮ ಬ್ಯಾಂಕಿಗೆ ನೀಡಿ ತನ್ನ ಖಾತೆಗೆ ಸಂಬಂಧಿಸಿದ ಚೆಕ್ಕುಗಳು ಬ್ಯಾಂಕಿಗೆ ಹಾಜರುಪಡಿಸಿದರೆ ಹಣ ಪಾವತಿಸದಂತೆ ಕೋರಿರುತ್ತಾರೆ ಎಂಬ ಪ್ರಶ್ನೆಗೆ ದಾಖಲಾತಿಯನ್ನು ಪರಿಶೀಲಿಸಿ ಸದರಿ ದಾಖಲಾತಿಯನ್ನು ನೋಡಿ ಒಪ್ಪಿರುತ್ತಾರೆ. ಸದರಿ ದಾಖಲಾತಿಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಯುನೈಟೆಡ್ ಬ್ಯಾಂಕಿನ ಖಾತೆದಾರರಿಗೆ ಬೇರೆ ಖಾತೆಗಳಿಂದ ಹಣವನ್ನು ವರ್ಗಾಯಿಸಬೇಕಾದರೆ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಐ.ಎಫ್.ಎಸ್.ಸಿ. ಕೋಡ್ ಮತ್ತು ಎಂ.ಐ.ಸಿ.ಆರ್.ನಂಬರನ್ನು ನಮೂದಿಸಬೇಕಾಗುತ್ತದೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

36. ಪಿ.ಡಬ್ಲ್ಯೂ2 ರವರ ತನ್ನ ಪಾಟೀ ಸವಾಲಿನಲ್ಲಿ ದಿನಾಂಕ 01-04-2020 ರಂದು ಯುನೈಟೆಡ್ ಬ್ಯಾಂಕ್‌ವು ಪಂಜಾಬ್ ನ್ಯಾಷನಲ್ ಬ್ಯಾಂಕ್ ನಲ್ಲಿ ವಿಲೀನಗೊಂಡಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದೇ ರೀತಿಯಾಗಿ ದಿನಾಂಕ 01-10-2021 ರಂದು ಪಂಜಾಬ್ ನ್ಯಾಷನಲ್ ಬ್ಯಾಂಕಿನವರು ಈ ಹಿಂದೆ ಯುನೈಟೆಡ್ ಬ್ಯಾಂಕಿನವರು ನೀಡಿರುವ ಎಲ್ಲಾ ಚೆಕ್ಕುಗಳಿಗೆ ಯಾವುದೇ ಮಾನ್ಯತೆ ಇಲ್ಲ ಎಂದು ಆದೇಶಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯು 2020 ನೇ ಸಾಲಿನಲ್ಲಿ ಆದ ವ್ಯವಹಾರಕ್ಕೆ

ಸಂಬಂಧಿಸಿದಂತೆ ತಮಗೆ ಕೊಟ್ಟಿರುವ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ದಾವೆಯನ್ನು ತನ್ನ ಹೆಂಡತಿಯು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

37. ಡಿ.ಡಬ್ಲ್ಯೂ-1 ರವರು ತನ್ನ ಪಾಟೀ ಸವಾಲಿನಲ್ಲಿ ತಾನು ದಿನಾಂಕ:05.05.2022 ರಂದು ವಾದಿಯ ಗಂಡನಿಗೆ ವಾದಿಯ ಹೆಸರಿನಲ್ಲಿರುವ ಚೆಕ್ಕನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ತಾನು ನಿ.ಪಿ-1 ರ ಚೆಕ್ಕನ್ನು ತಾನು ವಾದಿಯಿಂದ ಪಡೆದಿರುವ ಸಾಲದ ಮರು ಪಾವತಿಗಾಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ತನಗೆ ನಿ.ಪಿ-1 ರ ಚೆಕ್ಕು ಇನ್ ವ್ಯಾಲಿಡ್ ಎಂದು ಗೊತ್ತಿದ್ದರೂ ಕೂಡ ವಾದಿಗೆ ಮೋಸ ಮಾಡಲು ನಿ.ಪಿ-1 ರ ಚೆಕ್ಕನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ತಾನು ವಾದಿಗೆ ಯಾವುದೇ ಚೆಕ್ಕನ್ನು ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ.

38. ಪಿ.ಡಬ್ಲ್ಯೂ-1 ಹಾಗೂ 2 ರವರು ತಮ್ಮ ಪಾಟೀ ಸವಾಲಿನಲ್ಲಿ ಯುನೈಟೆಡ್ ಬ್ಯಾಂಕವು ಪಂಜಾಬ್ ನ್ಯಾಷನಲ್ ಬ್ಯಾಂಕಿನೊಂದಿಗೆ ವಿಲೀನಗೊಂಡಿರುತ್ತದೆ ಎಂಬ ಪ್ರತಿವಾದಿಯ ಪರ ವಕೀಲರ ಸಲಹೆಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಆದರೆ ಪಿ.ಡಬ್ಲ್ಯೂ-3 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಸದರಿ ಪಿ.ಡಬ್ಲ್ಯೂ-3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ:01-04-2020 ರಂದು ಯುನೈಟೆಡ್ ಬ್ಯಾಂಕವು ಪಂಜಾಬ್ ನ್ಯಾಷನಲ್ ಬಾಂಕಿನಲ್ಲಿ ಮರ್ಜ್ ಆಗಿರುತ್ತದೆ. ಯುನೈಟೆಡ್ ಬ್ಯಾಂಕವು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಮರ್ಜ್ ಆದನಂತರ ಯುನೈಟೆಡ್ ಬ್ಯಾಂಕಿನಲ್ಲಿ ಖಾತೆದಾರರ ಅಕೌಂಟ್ ನಂಬರುಗಳಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ ಹಾಗೂ ಯುನೈಟೆಡ್ ಬ್ಯಾಂಕವು ಮರ್ಜ್ ಆದನಂತರ ಸದರಿ ಖಾತೆದಾರರು ಚೆಕ್ಕುಗಳನ್ನು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಹಾಜರುಪಡಿಸುವುದು ಕಡ್ಡಾಯವಾಗಿರುವುದಿಲ್ಲ ಎಂದು ನುಡಿದಿರುವುದು ಕಂಡು ಬರುತ್ತದೆ.

39. ಪ್ರತಿವಾದಿಯು ತನ್ನ ಪ್ರತಿವಾದಕ್ಕೆ ಪೂರಕವಾಗಿ ತಾನು ನಿ.ಡಿ. 1 ರಂತೆ ದಿನಾಂಕ 17.06.2022 ರಂದು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕಳುಹಿಸಿರುವ ನೋಟೀಸನ್ನು ಹಾಜರುಪಡಿಸಿರುತ್ತಾರೆ. ವಾದಿಯು ಹಾಜರುಪಡಿಸಿರುವ ನಿ.ಪಿ.1

ಚೆಕ್ಕಿನಲ್ಲಿ ದಿನಾಂಕ:22.05.2022 ಎಂದು ಮತ್ತು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಎಂದು ನಮೂದು ಇರುತ್ತದೆ. ಅದೇ ರೀತಿಯಾಗಿ ಫಿರ್ಯಾದಿದಾರರು ಹಾಜರುಪಡಿಸಿರುವ ನಿ.ಪಿ.2 ಹಿಂಬರಹವನ್ನು ಪರಿಶೀಲಿಸಿದಾಗ ನಿ.ಪಿ.1 ರ ಚೆಕ್ಕು ರೆಫರ್ ಟು ಡ್ರಾಯರ್ ("Refer to Drawer'') ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಮೇಲಿನ ಬ್ಯಾಂಕ್ ಮ್ಯಾನೇಜರ್ ರವರಾದ ಪಿಡಬ್ಲ್ಯೂ-3 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಯುನೈಟೆಡ್ ಬ್ಯಾಂಕ್ ಮರ್ಜ್ ಆದ ನಂತರ ಸದರಿ ಬ್ಯಾಂಕಿನ ಖಾತೆದಾರರ ಚೆಕ್ಕುಗಳನ್ನು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಹಾಜರುಪಡಿಸುವುದು ಕಡ್ಡಾಯವಾಗಿರುವುದಿಲ್ಲ ಎಂದು ನುಡಿದಿರುವುದು ಕಂಡುಬರುತ್ತದೆ. ಈ ದಾವೆಯು ಕೇವಲ ಹಣದ ಮರು ಪಾವತಿಯ ದಾವೆಯಾಗಿರುವುದರಿಂದ ವಾದಿಯು ಪ್ರತಿವಾದಿಗೆ ಹಣವನ್ನು ಪಾವತಿಸಿರುತ್ತಾರೆ ಅಥವಾ ಇಲ್ಲವೋ ಎಂಬುದರ ಬಗ್ಗೆ ಮಾತ್ರ ಈ ದಾವೆಯಲ್ಲಿ ನಿರ್ಧರಿಸಬೇಕಾಗುತ್ತದೆ. ನಿಶಾನೆ ಪಿ.2 ರ ಹಿಂಬರಹದಲ್ಲಿ ನಮೂದಿಸಿರುವ ರೆಫರ್ ಟು ಡ್ರಾಯರ್ ("Refer to Drawer'') ಸಹ ನಿಶಾನೆ ಪಿ.1 ರ ಚೆಕ್ಕು ಅಮಾನ್ಯಗೊಳ್ಳಲು ಒಂದು ಕಾರಣವಾಗಿರುತ್ತದೆ. ಈ ಪ್ರಸ್ತುತ ದಾವೆಯಲ್ಲಿ ನಿಶಾನೆ ಪಿ.2 ರ ಚೆಕ್ ಇನ್ ವ್ಯಾಲಿಡ್ ಎಂದು ಬ್ಯಾಂಕಿನವರು ಹೇಳಿರುವುದಿಲ್ಲ. ಹಾಗಾಗಿ ಮಾನ್ಯ ಪ್ರತಿವಾದಿ ಪರ ವಕೀಲರ ವಾದವನ್ನು ಪರಿಗಣಿಸಲು ಬರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದೆ.

40. ಮಾನ್ಯ ಪ್ರತಿವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ವಾದಿಯು ಪ್ರತಿವಾದಿಗೆ ರೂ.3 ಲಕ್ಷ ಹಣವನ್ನು ಕೊಟ್ಟಿರುವ ಬಗ್ಗೆ ತನ್ನ ಆದಾಯ ತೆರಿಗೆಯಲ್ಲಿ ತೋರಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು ಪ್ರತಿವಾದಿ ಪರ ವಕೀಲರು ಮಾಡಿರುವ ವಾದವನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು ಪಿ.ಡಬ್ಲ್ಯೂ-1 ಮತ್ತು 2 ರವರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

41. ಪಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಆದಾಯ ತೆರಿಗೆಯ ಪಾವತಿದಾರಳಾಗಿರುತ್ತೇನೆ ಎಂದರೆ ಸರಿ. ತಾನು 2020-21 ನೇ ಸಾಲಿನ ಮತ್ತು 2021-22 ನೇ ಸಾಲಿನ ಆದಾಯ ತೆರಿಗೆಯನ್ನು ಪಾವಾತಿಸಿರುತ್ತೇನೆ ಎಂದರೆ ಸರಿ. ತಾನು ಪ್ರತಿವಾದಿಗೆ 3 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಕೊಟ್ಟಿರುವ ಬಗ್ಗೆ ತನ್ನ ಆದಾಯ ತೆರಿಗೆಯಲ್ಲಿ ತೋರಿಸಿಲ್ಲ ಎಂದು ನುಡಿದಿರುತ್ತಾರೆ. ಪಿ.ಡಬ್ಲ್ಯೂ-2 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಮತ್ತು ತನ್ನ ಹೆಂಡತಿ ಆದಾಯು ತೆರಿಗೆಯ ಪಾವತಿದಾರರಾಗಿರುತ್ತೇವೆ. ತನ್ನ ಹೆಂಡತಿಯು ಪ್ರತಿವಾದಿಗೆ ಎರಡೂ ಬಾರಿ ಕೊಟ್ಟಿರುವ ವ್ಯವಹಾರವನ್ನು ತನ್ನ ಹೆಂಡತಿಯ ಆದಾಯ ತೆರಿಗೆಯಲ್ಲಿ ತೋರಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಮೇಲಿನ ಪಿ.ಡಬ್ಲ್ಯೂ-1 ಮತ್ತು 2 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಪಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಪ್ರತಿವಾದಿಗೆ ಹಣವನ್ನು ಕೊಟ್ಟಿರುವ ಕುರಿತು ತಮ್ಮ ಆದಾಯ ತೆರಿಗೆಯಲ್ಲಿ ತೋರಿಸಿರುವುದಿಲ್ಲ ಎಂದು ನುಡಿದಿರುವುದು ಕಂಡು ಬರುತ್ತದೆ. ವಾದಿಯು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ವಾದಿಯು ಆದಾಯ ತೆರಿಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು ಕಂಡು ಬರುವುದಿಲ್ಲ.

42. ಈ ಕುರಿತು ನ್ಯಾಯಾಲಯವು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಈ ಕೆಳಗಿನ ತೀರ್ಪುಜನ್ಯವನ್ನು ಉಲ್ಲೇಖಿಸುತ್ತದೆ.

2019 Cr.R. 22 (Kant.)

S.M. Nataraja Vs. B.M. Prakash

Negotiable Instruments Act, 1881-Section 138- Criminal Procedure Code, 1973-Section 378- Dishonour of cheque- Appeal against acquittal- Accused has admitted hand loan as well as issuance of cheque- Complainant has proved his case beyond reasonable doubt-Trial Court only by going through two aspects of

complainant not disclosing alleged loan transaction in his income-tax return and not showing any corroborative material that he had source of income to lend money, has erroneously come to conclusion by pronouncing judgment of acquittal-Impugned judgment set aside-Accused convicted for offence punishable under Section 138 of N.I. Act.

43. ಈ ಮೇಲ್ಕಂಡ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪುಜನ್ಯವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಸದರಿ ತೀರ್ಪುಜನ್ಯದಲ್ಲಿ ಆರೋಪಿತನು ಫಿರ್ಯಾದುದಾರರಿಂದ ಕೈಸಾಲವನ್ನು ಪಡೆದ ಕುರಿತು ಹಾಗೂ ಸದರಿ ಸಾಲದ ಕುರಿತಾಗಿ ಚೆಕ್ಕನ್ನು ವಿತರಿಸಿರುವುದನ್ನು ಒಪ್ಪಿಕೊಂಡ ನಂತರದಲ್ಲಿ ಫಿರ್ಯಾದಿದಾರರಿಗೆ ಆರ್ಥಿಕ ಸಾಮಾರ್ಥ್ಯ ಇಲ್ಲ ಮತ್ತು ಆರ್ಥಿಕ ಸಾಮಾರ್ಥ್ಯಕ್ಕೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿಲ್ಲ ಹಾಗೂ ಫಿರ್ಯಾದುದಾರರು ಸದರಿ ವ್ಯವಹಾರದ ಕುರಿತು ಆದಾಯ ತೆರಿಗೆಯಲ್ಲಿ ತೋರಿಸಿಲ್ಲ ಎಂಬ ಕಾರಣದಿಂದ ಆರೋಪಿತನನ್ನು ನಿರಪರಾಧಿ ಎಂದು ನಿರ್ಣಯಿಸಲು ಬರುವುದಿಲ್ಲ ಎಂದು ನಿರ್ಣಯಿಸಿರುತ್ತದೆ.

44. ಈ ಮೇಲ್ಕಂಡ ತೀರ್ಪುಜನ್ಯವನ್ನು ಪರಿಶೀಲಿಸಲಾಗಿ ಪ್ರಸ್ತುತ ಈ ಪ್ರಕರಣದಲ್ಲಿ ಪ್ರತಿವಾದಿಯು ವಾದಿಗೆ ಚೆಕ್ ನ್ನು ವಿತರಿಸಿರುವುದನ್ನು ಪರೋಕ್ಷವಾಗಿ ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಈ ಮೇಲ್ಕಂಡ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪಿನ ಅನುಪಾತವು ಪ್ರಸ್ತುತ ಈ ಪ್ರಕರಣದ ವಸ್ತುಸ್ಥಿತಿಗೆ ಅನ್ವಯಿಸುತ್ತದೆ ಎಂದು ನ್ಯಾಯಾಲಯ ತೀರ್ಮಾನಕ್ಕೆ ಬರುತ್ತದೆ. ಅಲ್ಲದೇ ವಾದಿಯು ಪ್ರತಿವಾದಿಗೆ ಹಣವನ್ನು ಸಾಲವಾಗಿ ನೀಡಿರುವ ಕುರಿತು ಆದಾಯ ತೆರಿಗೆಯ ಮರು ಪಾವತಿಯಲ್ಲಿ ತೋರಿಸದೆ ಇದ್ದರೆ ಈ ಕುರಿತು ಸದರಿ ವಿಷಯದ ಕುರಿತು ತನಿಖೆ ಮಾಡಲು ಸಕ್ಷಮ ಪ್ರಾಧಿಕಾರಗಳು ಇರುತ್ತವೆ ಹಾಗೂ ಸದರಿ ಸಕ್ಷಮ

ಪ್ರಾಧಿಕಾರಗಳು ವಾದಿಯ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುತ್ತವೆ ಪ್ರತಿವಾದಿಗೆ ವಾದಿಯು ಹಣವನ್ನು ಕೊಟ್ಟಿರುವ ಬಗ್ಗೆ ಆದಾಯ ತೆರಿಗೆಯಲ್ಲಿ ತೋರಿಸದೇ ಇರುವುದು ವಾದಿಯು ಪ್ರಕರಣಕ್ಕೆ ಯಾವುದೇ ರೀತಿಯ ಬಾಧಕವಾಗುವುದಿಲ್ಲ. ಹಾಗಾಗಿ ಪ್ರತಿವಾದಿ ಪರ ವಕೀಲರ ವಾದವನ್ನು ಪರಿಗಣಿಸಲು ಬರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

45. ಮಾನ್ಯ ಪ್ರತಿವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ನಿಶಾನೆ.ಪಿ.1 ರ ಚೆಕ್ಕಿನಲ್ಲಿ ಪ್ರತಿವಾದಿಯು ಸಹಿ ಮಾತ್ರ ಇರುತ್ತದೆ ಉಳಿದ ಅಂಶಗಳನ್ನು ವಾದಿಯೇ ಭರ್ತಿ ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ಮಾನ್ಯ ವಾದಿ ಪರ ವಕೀಲರು ಪ್ರತಿವಾದಿ ಪರ ವಕೀಲರ ವಾದವನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು ಉಭಯ ಪಕ್ಷಗಾರರ ಸಾಕ್ಷ್ಯವನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

46. ಪಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ನಿಶಾನೆ.ಪಿ.1 ರ ಚೆಕ್ಕಿನಲ್ಲಿರುವ ಸಹಿ ಮಾಡಿರುವ ಇಂಕಿಗೂ ಮತ್ತು ನಿಶಾನೆ.ಪಿ.1 ಚೆಕ್ಕಿನಲ್ಲಿ ಭರ್ತಿ ಮಾಡಿರುವ ಉಳಿದ ಬರವಣಿಗೆಯ ಇಂಕಗಳು ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿ.ಪಿ.1 ರ ಚೆಕ್ಕನ್ನು ಪ್ರತಿವಾದಿಯು ಭರ್ತಿ ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ದಿನಾಂಕ 05-05-2022 ರಂದು ತನ್ನ ಗಂಡನು ಪ್ರತಿವಾದಿಯಿಂದ ನಿ.ಪಿ-1 ರ ಚೆಕ್ಕನ್ನು ಪಡೆದಿರುತ್ತಾರೆ. ನಿ.ಪಿ.-1 ರ ಚೆಕ್ಕನ್ನು ತನ್ನ ಗಂಡನು ಪ್ರತಿವಾದಿಯಿಂದ ಪಡೆದಿರುವುದರಿಂದ ನಿಪಿ-1 ರ ಚೆಕ್ಕನ್ನು ಭರ್ತಿ ಮಾಡುವ ಸಮಯದಲ್ಲಿ ತಾನು ಇರಲಿಲ್ಲ ಎಂದರೆ ಸಾಕ್ಷಿಯು ತನ್ನ ಗಂಡನಿಗೆ ಗೊತ್ತು ಎಂದು ಹೇಳುತ್ತಾರೆ. ಪ್ರತಿವಾದಿಯು ನಿಮ್ಮ ಗಂಡನಿಗೆ ಖಾಲಿ ಚೆಕ್ಕನ್ನು ಕೊಟ್ಟಿರಬಹುದು ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯು ಚೆಕ್ಕನ್ನು ಭರ್ತಿ ಮಾಡಿಕೊಟ್ಟಿರುತ್ತಾನೆ ಎಂದು ತನ್ನ ಗಂಡನು ತನಗೆ ತಿಳಿಸಿರುತ್ತಾನೆ ಎಂದು ನುಡಿದಿರುತ್ತಾಳೆ. ಪಿ.ಡಬ್ಲ್ಯೂ-2 ರವರು ತನ್ನ ಪಾಟೀ ಸವಾಲಿನಲ್ಲಿ ನಿ.ಪಿ.1 ರ ಚೆಕ್ಕಿನಲ್ಲಿ

ಬರೆದಿರುವ ಇಂಕಿಗೂ ಮತ್ತು ಚೆಕ್ಕಿನಲ್ಲಿ ಉಳಿದ ಅಂಶಗಳನ್ನು ಭರ್ತಿ ಮಾಡಿದ ಪೆನ್ನಿನ ಇಂಕಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

47. ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಒಮ್ಮೆ ವರ್ಗಾವಣೆಯ ಲಿಖಿತ ಪತ್ರದ ಜಾರಿಗೊಳಿಸುವಿಕೆಯನ್ನು ಸಾಬೀತುಪಡಿಸಿದರೆ ಅಥವಾ ಒಪ್ಪಿಕೊಂಡಲ್ಲಿ ನ್ಯಾಯಾಲಯವು ಸದರಿ ಲಿಖಿತ ವರ್ಗಾವಣೆಯ ಪತ್ರವನ್ನು ನ್ಯಾಯಯುತ ಪ್ರತಿಫಲಕ್ಕಾಗಿ ಮತ್ತು ಕಾನೂನುಬದ್ಧವಾಗಿ ವಸೂಲಿ ಮಾಡಬಹುದಾದ ಸಾಲದ ಕುರಿತು ನೀಡಿರುತ್ತಾರೆಂದು ಪೂರ್ವಭಾವನೆಯನ್ನು ಮಾಡಬಹುದೆಂದು ಸ್ಪಷ್ಟೀಕರಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಪ್ರಕರಣದ ಪ್ರಶ್ನಿತ ಚೆಕ್ ಪ್ರತಿವಾದಿಗೆ ಸಂಬಂಧಿಸಿದ್ದೇ ಮತ್ತು ಸದರಿ ಚೆಕ್ಕಿನಲ್ಲಿನ ಸಹಿ ಪ್ರತಿವಾದಿಯದ್ದೇ ಎಂಬುವುದನ್ನು ಪರಿಶೀಲಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಪ್ರತಿವಾದಿಯು ನಿ.ಪಿ.1 ರ ಚೆಕ್ ತನ್ನ ಖಾತೆಗೆ ಸಂಬಂಧಿಸಿದ್ದು ಹಾಗೂ ನಿ.ಪಿ.1 ರ ಚೆಕ್ಕಿನಲ್ಲಿರುವ ಸಹಿಯು ತನ್ನದು ಇರುತ್ತದೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ.

48. ಈ ಕುರಿತು ಲಿಖಿತ ವರ್ಗಾವಣೆ ಪತ್ರಗಳ ಅಧಿನಿಯಮ ಕಲಂ 20 ನ್ನು ಪರಿಶೀಲಿಸುವುದು ಅತ್ಯಗತ್ಯವಾಗಿರುತ್ತದೆ.

> **20.** ಅಪೂರ್ಣ ಮುದ್ರಾಂಕದ ಲಿಖಿತಗಳು **(Inchoate stamped instrument)** ಒಬ್ಬ ವ್ಯಕ್ತಿಯು (ಭಾರತದಲ್ಲಿ ಜಾರಿಯಲ್ಲಿರುವ ವರ್ಗಾವಣೀಯ ಲಿಖಿತಗಳ ಕಾನೂನಿನ ಮೇರೆಗೆ ಸಹಿ ಮಾಡಿದ ಮತ್ತು ಸಂಪೂರ್ಣವಾಗಿ ಖಾಲಿಯಾದ ಅಥವಾ ಅಪೂರ್ಣವಾದ ವರ್ಗಾವಣೀಯ ಲಿಖಿತವನ್ನು ಬರೆದ ಒಂದು ಮುದ್ರಾಂಕ ಕಾಗದವನ್ನು ಮತ್ತೊಬ್ಬ ವ್ಯಕ್ತಿಗೆ ನೀಡಿದರೆ, ಆತನು ಈ ಮೂಲಕ ಅದರ ಧಾರಕನಿಗೆ ಅದರಲ್ಲಿ ನಿಗಧಿಪಡಿಸಿದ ಯಾವುದೇ ಮೊತ್ತಕ್ಕಾಗಿ ಮತ್ತು ಮುದ್ರಾಂಕದ ವ್ಯಾಪ್ತಿಗೊಳಪಟ್ಟ ಮೊತ್ತವನ್ನು ಮೀರದೆ, ಅದರ ಮೇಲೆ ಒಂದು ವರ್ಗಾವಣೀಯ ಲಿಖಿತವಾಗಿ, ಸಂದರ್ಭಾನುಸಾರ, ಮಾಡಲು ಅಥವಾ ಸಂಪೂರ್ಣಗೊಳಿಸಲು ಮೇಲ್ನೋಟಕ್ಕೆ ಅಧಿಕಾರವನ್ನು ನೀಡುತ್ತಾನೆ. ಹಾಗೆ ಸಹಿ ಮಾಡಿದ ವ್ಯಕ್ತಿಯು ಅದನ್ನು ಸಹಿ ಮಾಡಿದ ಸಾಮರ್ಥ್ಯದಲ್ಲಿ ಅಂತಹ ಮೊತ್ತಕ್ಕಾಗಿ ಯಥಾಕ್ರಮದಲ್ಲಿ

> ಯಾವನೇ ಧಾರಕನಿಗೆ ಅಂತಹ ಲಿಖಿತದ ಮೇರೆಗೆ ಬದ್ಧವಾಗಿರತಕ್ಕದ್ದು.
>
> ಪರಂತು ಯಥಾಕ್ರಮದ ಒಬ್ಬ ಧಾರಕನನ್ನು ಹೊರತುಪಡಿಸಿ ಯಾವನೇ ವ್ಯಕ್ತಿಯು ಲಿಖಿತವನ್ನು ನೀಡುವ ವ್ಯಕ್ತಿಯಿಂದ ಅದರಡಿಯಲ್ಲಿ ಆತನಿಂದ ಪಾವತಿಸಲು ಉದ್ದೇಶಿಸಿದ ಮೊತ್ತಕ್ಕಿಂತ ಯಾವುದೇ ಅಧಿಕ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

49. ಈ ಕುರಿತು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪುಜನ್ಯವನ್ನು ಉಲ್ಲೇಖಿಸುವುದು ಅತ್ಯವಶ್ಯಕವಾಗಿರುತ್ತದೆ. **AIR 2000 KAR 169 (H.Marigowda -Vs – Thippamma & others)** ಈ ತೀರ್ಪುಜನ್ಯದಲ್ಲಿ ಈ ಕೆಳಗಿನಂತೆ ಉಲ್ಲೇಖ ಇರುತ್ತದೆ.

> " As per Sec.20 of Negotiable Instrument Act, even if be a blank Negotiable Instrument is given the holder as authority to make or complete the instrument as negotiable one."

50. ಈ ಮೇಲಿನ ಕಾನೂನಿನ ಪರಿಕಲ್ಪನೆಯನ್ನು ಮತ್ತು ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪುಜನ್ಯವನ್ನು ಪರಿಶೀಲಿಸಿದಾಗ ಯಾವುದೇ ಒಬ್ಬ ವ್ಯಕ್ತಿ ಸಹಿ ಮಾಡಿದ ಲಿಖಿತ ವರ್ಗಾವಣೆಗಳ ದಾಖಲೆಗಳನ್ನು ಮತ್ತೊಬ್ಬನಿಗೆ ನೀಡಿದ್ದು, ಸದರಿ ದಾಖಲೆಯನ್ನು ಪೂರ್ಣ ಖಾಲಿಯನ್ನಾಗಿ ಅಥವಾ ಅಪೂರ್ಣ ಬರವಣಿಗೆ ಮಾಡಿದ ದಾಖಲೆಯನ್ನು ನೀಡಿದರೆ ಅದನ್ನು ಪೂರ್ಣಗೊಳಿಸಲು ಆ ವ್ಯಕ್ತಿ ಧಾರಕನಿಗೆ ಸಂಪೂರ್ಣ ಅಧಿಕಾರ ನೀಡಿದ್ದಾನೆ ಮತ್ತು ಸದರಿ ದಾಖಲೆಯಲ್ಲಿ ಬರೆದಿರುವ ಮೊತ್ತಕ್ಕೆ ಸಹಿ ಮಾಡಿದ ವ್ಯಕ್ತಿಯು ಭಾಧ್ಯಸ್ಥರಾಗಿರುತ್ತಾರೆ. ಹಾಗಾಗಿ ಪ್ರತಿವಾದಿಯು ತನ್ನ ಸಹಿ ಮಾಡಿದ ಖಾಲಿ ಚೆಕ್ಕನ್ನು ವಾದಿಗೆ ಕೊಟ್ಟಿರುವುದಾಗಿ ಪ್ರತಿವಾದಿಯು ಹೇಳಿದ ನಂತರ ವಾದಿಗೆ ಅದನ್ನು ಭರ್ತಿಮಾಡಿಕೊಳ್ಳಲು ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದಾನೆ ಎಂದು ಪರಿಗಣಿಸತಕ್ಕದ್ದು ಎಂದು ಉಲ್ಲೇಖಿಸಿರುವುದು ಕಂಡು ಬರುತ್ತದೆ.

ಆದುದ್ದರಿಂದ ಪ್ರತಿವಾದಿಯು ಸಹಿ ಮಾಡಿಕೊಟ್ಟ ಚೆಕ್ಕನ್ನು ವಾದಿಯು ಭರ್ತಿ ಮಾಡಿಕೊಂಡಿರುವ ಕಾರಣ ವಾದಿಗೆ ಹಣವನ್ನು ಪಾವತಿಸಲು ಭಾಧ್ಯಸ್ಥನಲ್ಲ ಎಂದು ಪ್ರತಿವಾದಿಯು ವಾದಿಸುವುದು ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ.

51. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಿಯು ತನ್ನ ಸಹೋದರನಾದ ಗುರುರಾಜ್ ಬಾದಾಮಿರವರ ಮೂಲಕ ದಿನಾಂಕ:10.02.2020 ರಂದು ರೂ.2 ಲಕ್ಷ ಹಣವನ್ನು ವಾದಿಯಿಂದ ಪಡೆದಿದ್ದು, ಸದರಿ ಸಮಯದಲ್ಲಿ ಪ್ರತಿವಾದಿಯು ವಾದಿಯ ಪರವಾಗಿ ಒಂದು ಕರಾರು ಪತ್ರವನ್ನು ಜಾರಿ ಮಾಡಿಕೊಟ್ಟಿರುತ್ತಾರೆ. ಆದರ ಜೊತೆಗೆ ಪ್ರತಿವಾದಿಯು ಸಹಿ ಮಾಡಿದ ಒಂದು ಖಾಲಿ ಚೆಕ್ಕನ್ನು ವಾದಿಗೆ ಹಣದ ಭದ್ರತೆಗಾಗಿ ನೀಡಿರುತ್ತಾರೆ. ಪ್ರತಿವಾದಿಯು ವಾದಿಗೆ ಭದ್ರತೆಗಾಗಿ ನೀಡಿರುವ ಚೆಕ್ಕು ಸಂಖ್ಯೆ 346117 ಆಗಿರುತ್ತದೆ ಮತ್ತು ತದನಂತರ ಪ್ರತಿವಾದಿಯು ದಿನಾಂಕ:11.11.2020 ರಂದು ವಾದಿಗೆ ತಾನು ಪಡೆದ ಸಾಲವನ್ನು ವಾದಿಯ ಖಾತೆಗೆ ನೆಫ್ಟ್ ಮುಖಾಂತರ ವರ್ಗಾಯಿಸಿದ್ದರೂ ಕೂಡ ವಾದಿಯು ಕರಾರು ಪತ್ರವನ್ನು ಮರಳಿ ಕೊಟ್ಟಿರುತ್ತಾರೆ ಆದರೆ ಚೆಕ್ಕು ಮನೆಯಲ್ಲಿ ಎಲ್ಲೋ ಇರುತ್ತದೆ ಎಂದು ಹೇಳಿರುತ್ತಾರೆ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು ಪ್ರತಿವಾದಿಯ ಪ್ರತಿವಾದವನ್ನು ನಿರ್ಧಿಷ್ಟವಾಗಿ ಅಲ್ಲಗಳೆದು ದಿನಾಂಕ: 10.02.2020 ರಂದು ಆದ ವ್ಯವಹಾರವೇ ಬೇರೆ ಮತ್ತು ಈ ದಾವೆಯಲ್ಲಿ ಹೇಳಿರುವ ವ್ಯವಹಾರವೇ ಬೇರೆ ಬೇರೆ ಆಗಿರುತ್ತದೆ ಎಂದು ಹೇಳಿರುತ್ತಾರೆ. ಈ ಕುರಿತು ಉಭಯ ಪಕ್ಷಗಾರರ ಸಾಕ್ಷ್ಯವನ್ನು ಪರಿಶೀಲಿಸುವುದು ಅತ್ಯಗತ್ಯವಾಗಿರುತ್ತದೆ.

52. ಪಿ.ಡಬ್ಲ್ಯೂ.1 ರವರು ತನ್ನ ಪಾಟೀ ಸವಾಲಿನಲ್ಲಿ ತನ್ನ ಮತ್ತು ಪ್ರತಿವಾದಿಯು ಮಧ್ಯೆ ಈ ದಾವೆಯಲ್ಲಿ ಹೇಳಿರುವ ಹಣದ ವ್ಯವಹಾರವನ್ನು ಹೊರತುಪಡಿಸಿ ಇನ್ನೊಂದು ಹಣದ ವ್ಯವಹಾರವು ತನ್ನ ಮತ್ತು ಪ್ರತಿವಾದಿಯ ಮಧ್ಯೆ ಆಗಿರುತ್ತದೆ. ಸದರಿ ತನ್ನ ಮತ್ತು ಪ್ರತಿವಾದಿಯ ಮಧ್ಯೆ ಆದ ಇನ್ನೊಂದು ಹಣದ ವ್ಯವಹಾರವು 2 ಲಕ್ಷ ಹಣದ ಕುರಿತು ಆಗಿರುತ್ತದೆ ಎಂದರೆ ಸರಿ. ತನ್ನ ಮತ್ತು ಪ್ರತಿವಾದಿಯ ಮಧ್ಯೆ 2 ಲಕ್ಷ ಹಣದ ವ್ಯವಹಾರವಾಗುವಾಗ ತಾನು ಪ್ರತಿವಾದಿಯಿಂದ ಯಾವುದೇ ಚೆಕ್ಕನ್ನು

ಪಡೆದಿರುವುದಿಲ್ಲ. ತನ್ನ ಮತ್ತು ಪ್ರತಿವಾದಿಯ ಮಧ್ಯೆ 3 ಲಕ್ಷ ರೂಪಾಯಿ ಹಣದ ವ್ಯವಹಾರವಾಗುವ ಸಮಯದಲ್ಲಿ ತಾನು ಪ್ರತಿವಾದಿ ಭದ್ರತೆಗಾಗಿ ಚೆಕ್ಕನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಿನಾಂಕಃ 10.02.2020 ರಂದು ತನ್ನಿಂದ 2 ಲಕ್ಷ ರೂಪಾಯಿ ಹಣವನ್ನು ಪಡೆದಿರುತ್ತಾನೆ ಎಂದರೆ ಸರಿ. ಪ್ರತಿವಾದಿಯು ದಿನಾಂಕಃ 11.11.2020 ರಂದು ಸದರಿ 2 ಲಕ್ಷ ರೂಪಾಯಿ ಹಣವನ್ನು ತನಗೆ ಮರು ಪಾವತಿಸಿರುತ್ತಾನೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಪಿ.ಡಬ್ಲ್ಯೂ.2 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ಹೆಂಡತಿಯು 2020 ನೇ ಸಾಲಿನ ಫೆಬ್ರುವರಿ ತಿಂಗಳಿನಲ್ಲಿ ಪ್ರತಿವಾದಿಗೆ 2 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದರು ಮತ್ತು ಸದರಿ ಹಣವನ್ನು ಪ್ರತಿವಾದಿಯು ತನ್ನ ಹೆಂಡತಿಗೆ 2020 ನೇ ಇಸವಿಯಲ್ಲಿ 2 ಲಕ್ಷ ರೂಪಾಯಿ ಹಣವನ್ನು ಮರು ಪಾವತಿಸಿರುತ್ತಾರೆ. 2020 ನೇ ಇಸವಿಯಲ್ಲಿ ಪ್ರತಿವಾದಿಯು ನಿಮಗೆ ಹಣವನ್ನು ಕೇಳಿದ್ದರೂ ಕೂಡ ಏಕೆ ನಿಮ್ಮ ಹೆಂಡತಿಯ ಖಾತೆಯಿಂದ ಹಣವನ್ನು ಪ್ರತಿವಾದಿಗೆ ವರ್ಗಾಯಿಸಿರುತ್ತೀರ ಎಂಬ ಪ್ರಶ್ನೆಗೆ ಸಾಕ್ಷಿಯು ತನ್ನ ಖಾತೆಯಲ್ಲಿ ಹಣ ಇಲ್ಲದೇ ಇರುವುದರಿಂದ ತನ್ನ ಹೆಂಡತಿಯ ಖಾತೆಯಲ್ಲಿ ಹಣ ಇರುವುದರಿಂದ ತನ್ನ ಹೆಂಡತಿಯ ಖಾತೆಯಿಂದ ಪ್ರತಿವಾದಿಯ ಖಾತೆಗೆ ಹಣವನ್ನು ವರ್ಗಾಯಿಸಿರುತ್ತೇವೆ. 2020 ನೇ ಸಾಲಿನಲ್ಲಿ ಪ್ರತಿವಾದಿಗೆ ತನ್ನ ಹೆಂಡತಿಯು ಹಣವನ್ನು ಕೊಡುವ ಸಮಯದಲ್ಲಿ ಯಾವುದೇ ದಾಖಲಾತಿಯನ್ನು ಪ್ರತಿವಾದಿಯಿಂದ ಬರೆಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ.

53. ಈ ಮೇಲಿನ ಪಿ.ಡಬ್ಲ್ಯೂ .1 ಮತ್ತು 2 ರವರು ಪಾಟೀ ಸವಾಲನ್ನು ಪರಿಶೀಲಿಸಿದಾಗ ವಾದಿಯು ಪ್ರತಿವಾದಿಗೆ ದಿನಾಂಕಃ10.02.2020 ರಂದು ರೂ.2 ಲಕ್ಷ ಹಣವನ್ನು ಕೊಟ್ಟಿರುವ ಬಗ್ಗೆ ಹಾಗೂ ಸದರಿ ಹಣವನ್ನು ದಿನಾಂಕಃ 11.02.2020 ರಂದು ಪ್ರತಿವಾದಿಯು ವಾದಿಗೆ ನೆಫ್ಟ್ ಮುಖಾಂತರ ಮರು ಪಾವತಿಸಿರುತ್ತಾರೆ ಎಂಬುದರ ಕುರಿತು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡುಬರುತ್ತದೆ. ಆದರೆ ಪಿ.ಡಬ್ಲ್ಯೂ.1 ಮತ್ತು 2 ರವರು ದಿನಾಂಕಃ10.02.2020 ರಂದು ತಮ್ಮಿಂದ ಪ್ರತಿವಾದಿಯು ಹಣವನ್ನು ಪಡೆಯುವ ಸಮಯದಲ್ಲಿ ಭದ್ರತೆಗಾಗಿ ನಿಶಾನೆ ಪಿ.1 ರ ಚೆಕ್ಕನ್ನು ಮತ್ತು ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂಬ ಪ್ರತಿವಾದಿ ಪರ

ವಕೀಲರ ಸಲಹೆಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

54. ಡಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ನೀವು ನಿಮ್ಮ ಪ್ರತಿವಾದ ಪತ್ರದ ಪ್ಯಾರ ನಂಃ15 ರಲ್ಲಿ ದಿನಾಂಕಃ 10.02.2020 ರಂದು ವಾದಿಯ ಕಡೆಯಿಂದ 2 ಲಕ್ಷ ಹಣವನ್ನು ಸಾಲವಾಗಿ ಪಡೆದು ಒಂದು ಕರಾರು ಪತ್ರವನ್ನು ವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುತ್ತೇನೆ ಎಂದು ಹೇಳಿದ್ದೀರಾ, ಸದರಿ ಕರಾರು ಪತ್ರವನ್ನು ಎಲ್ಲಿ ಮತ್ತು ಯಾವಾಗ ಬರೆದುಕೊಟ್ಟಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಕರಾರು ಪತ್ರವನ್ನು ತಮ್ಮ ಮನೆಯಲ್ಲಿ ಮತ್ತು ತಾನು ಹಣವನ್ನು ಪಡೆಯುವ 2-3 ದಿನಗಳ ಮೊದಲೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ ಸಾಕ್ಷಿಯು ಮುಂದುವರೆದು ಸದರಿ ಕರಾರು ಪತ್ರವನ್ನು ಮತ್ತು ಚೆಕ್ಕನ್ನು ತಮ್ಮ ತಮ್ಮನ ಕಡೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಕರಾರು ಪತ್ರವನ್ನು ಬರೆದುಕೊಡುವ ಸಮಯದಲ್ಲಿ ತಾನು ಮತ್ತು ತನ್ನ ತಮ್ಮ ಮಾತ್ರ ಇದ್ದೇವು ತಾನು ಸದರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ತಾನು ವಾದಿಗೆ ಹಣವನ್ನು ಮರುಪಾವತಿಸಿದ 2-3 ದಿನಗಳ ನಂತರ ಕರಾರು ಪತ್ರವನ್ನು ವಾದಿ ಕಡೆಯಿಂದ ತನ್ನ ತಮ್ಮನ ಮುಖಾಂತರ ಮರಳಿ ಪಡೆದಿರುತ್ತೇನೆ. ತಾನು ವಾದಿಯಿಂದ ಕೊಟ್ಟಿರುವ ಬ್ಲಾಂಕ್ ಚೆಕ್ಕನ್ನು ಮರಳಿ ಕೊಡುವಂತೆ ಕೇಳಿದ್ದಾಗಿಯೂ ಸಹ ವಾದಿಯು ಸದರಿ ಖಾಲಿ ಚೆಕ್ಕು ಕಳುವಾಗಿರುತ್ತದೆ ಎಂದು ತನಗೆ ಹೇಳಿರುತ್ತಾರೆ. ದಿಃ 11-11-2020 ರಿಂದ ದಿಃ17-06-2022 ರವರೆಗೆ ವಾದಿಗೆ ಖಾಲಿ ಚೆಕ್ಕನ್ನು ಮರಳಿ ಕೊಡುವಂತೆ ವಾದಿಗೆ ಯಾವುದೇ ನೋಟಿಸನ್ನು ತಾನು ನೀಡಿರುವುದಿಲ್ಲ. ವಾದಿಯು ತನಗೆ ಖಾಲಿ ಚೆಕ್ಕನ್ನು ಮರಳಿ ಕೊಡದೆ ಇರುವುದರ ಕುರಿತು ತಾನು ವಾದಿಯ ವಿರುದ್ಧ ಯಾವುದೇ ಪೊಲೀಸ್ ಕಂಪ್ಲೇಂಟನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ ಎಂದು ನುಡಿದಿರುವುದು ಕಂಡಬುರುತ್ತದೆ.

55. ಈ ಮೇಲಿನ ಡಿ.ಡಬ್ಲ್ಯೂ.1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ದಿನಾಂಕಃ10.02.2020 ರಂದು ವಾದಿ ಕಡೆಯಿಂದ ರೂ.2 ಲಕ್ಷ ಹಣವನ್ನು ಸಾಲವಾಗಿ

ಪಡೆದಿರುವ ಕುರಿತು ಸದರಿ ಕರಾರು ಪತ್ರವನ್ನು ತಮ್ಮ ಮನೆಯಲ್ಲಿ ಬರೆದು ಕೊಟ್ಟಿರುವ ಬಗ್ಗೆ ತಾನು ಹಣವನ್ನು ಪಡೆಯುವ 2-3 ದಿನಗಳ ಮೊದಲೇ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಸದರಿ ಕರಾರು ಪತ್ರ ಮತ್ತು ಚೆಕ್ಕನ್ನು ತನ್ನ ತಮ್ಮನ ಕಡೆ ಕೊಟ್ಟಿರುತ್ತೇನೆ, ಸದರಿ ಕರಾರು ಪತ್ರವನ್ನು ಬರೆದುಕೊಡುವ ಸಮಯದಲ್ಲಿ ತಾನು ಮತ್ತು ತನ್ನ ತಮ್ಮ ಮಾತ್ರ ಇದ್ದೇವು, ತಾನು ಸದರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ತಾನು ವಾದಿಗೆ ಹಣವನ್ನು ಮರು ಪಾವತಿಸಿದ 2-3 ದಿನಗಳ ನಂತರ ಕರಾರು ಪತ್ರವನ್ನು ವಾದಿ ಕಡೆಯಿಂದ ತನ್ನ ತಮ್ಮನ ಮುಖಾಂತರ ಮರಳಿ ಪಡೆದಿರುತ್ತೇನೆ, ದಿ:11-11-2020 ರಿಂದ ದಿ:17.06.2022 ರವರೆಗೆ ವಾದಿಗೆ ಖಾಲಿ ಚೆಕ್ಕನ್ನು ಮರಳಿ ಕೊಡುವಂತೆ ವಾದಿಗೆ ಯಾವುದೇ ನೋಟಿಸನ್ನು ತಾನು ನೀಡಿರುವುದಿಲ್ಲ, ವಾದಿಯು ತನಗೆ ಖಾಲಿ ಚೆಕ್ಕನ್ನು ಮರಳಿ ಕೊಡದೇ ಇರುವುದರ ಕುರಿತು ತಾನು ವಾದಿಯ ವಿರುದ್ಧ ಯಾವುದೇ ಪೊಲೀಸ್ ಕಂಪ್ಲೇಂಟನ್ನು ಕೊಟ್ಟಿರುವುದಿಲ್ಲ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡುಬರುತ್ತದೆ.

56. ಈ ಮೇಲಿನ ಪಿ.ಡಬ್ಲ್ಯೂ.1, 2 ಮತ್ತು ಡಿ.ಡಬ್ಲ್ಯೂ. 1 ರವರ ಸಾಕ್ಷ್ಯವನ್ನು ಕೂಲಕುಂಷವಾಗಿ ಪರಿಶೀಲಿಸಿದಾಗ ಪಿ.ಡಬ್ಲ್ಯೂ. 1 ಮತ್ತು 2 ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ:10.02.2020 ರಂದು ವಾದಿಯು ಪ್ರತಿವಾದಿಗೆ ರೂ. 2 ಲಕ್ಷ ಹಣವನ್ನು ಕೊಟ್ಟಿರುವ ಕುರಿತು ಮತ್ತು ಸದರಿ ಹಣವನ್ನು ಪ್ರತಿವಾದಿಯು ವಾದಿಗೆ ದಿನಾಂಕ:11.02.2020 ರಂದು ಮರು ಪಾವತಿಸಿರುವ ಬಗ್ಗೆ ಒಪ್ಪಿ ಕೊಂಡಿರುತ್ತಾರೆ. ಆದರೆ ಸದರಿ ಪಿ.ಡಬ್ಲ್ಯೂ1 ಮತ್ತು 2 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ:10.02.2020 ರಂದು ತಾವು ರೂ.2 ಲಕ್ಷ ಹಣವನ್ನು ಪ್ರತಿವಾದಿಗೆ ಕೊಡುವ ಸಮಯದಲ್ಲಿ ಹಣದ ಭದ್ರತೆಗಾಗಿ ಕರಾರು ಪತ್ರವನ್ನು ಬರೆಸಿಕೊಂಡಿರುವ ಕುರಿತು ಮತ್ತು ನಿಶಾನೆ.ಪಿ.1 ರ ಚೆಕ್ಕನ್ನು ಪಡೆದಿರುವ ಕುರಿತು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಡಿ.ಡಬ್ಲ್ಯೂ .1 ರವರು ತಮ್ಮ ಪಾಟೀ ಸವಾಲಿನಲ್ಲಿ ಕರಾರು ಪತ್ರವನ್ನು ತಮ್ಮ ಮನೆಯಲ್ಲಿ ವಾದಿಗೆ ಬರೆದುಕೊಟ್ಟಿರುತ್ತೇನೆ ಸದರಿ ಕರಾರು

ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ವಾದಿಯು ಚೆಕ್ಕನ್ನು ಮರಳಿ ಕೊಡದೇ ಇರುವ ಕುರಿತು ತಾನು ವಾದಿಯ ವಿರುದ್ಧ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದು ನುಡಿದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷಣೆಗೆ ಪೂರಕವಾಗಿ ಯಾವುದೇ ದಾಖಲಾತಿಗಳನ್ನು ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಮತ್ತು ಈ ಕುರಿತು ಯಾವುದೇ ಸಾಕ್ಷಿದಾರರನ್ನು ಸಹ ವಿಚಾರಣೆಗೆ ಒಳಪಡಿಸಿರುವುದಿಲ್ಲ. ಪ್ರತಿವಾದಿಯು ದಿನಾಂಕ:11.11.2020 ರಿಂದ ಇಲ್ಲಿಯವರೆಗೂ ತಾನು ಕೊಟ್ಟಿರುವ ಚೆಕ್ಕನ್ನು ಮರಳಿ ಕೊಡುವಂತೆ ವಾದಿಗೆ ಯಾವುದೇ ನೋಟೀಸನ್ನು ಮತ್ತು ಸಂಬಂಧಪಟ್ಟ ಪೋಲೀಸ್ ಠಾಣೆಗೂ ಸಹ ಯಾವುದೇ ದೂರನ್ನು ನೀಡಿರುವುದು ಕಂಡುಬರುವುದಿಲ್ಲ. ಒಂದು ವೇಳೆ ವಾದಿಯು ನಿಶಾನೆ.ಪಿ.1 ರ ಚೆಕ್ಕನ್ನು ಮರಳಿ ಕೊಡದೇ ಇದ್ದಾಗ ತನಗೆ ವಾದಿಯ ವಿರುದ್ಧ ಕ್ರಮ ತೆಗೆದುಕೊಳ್ಳಲು ಏನು ತೊಂದರೆ ಇತ್ತು ಎಂಬುದರ ಕುರಿತು ಸಹ ಯಾವುದೇ ಕಾರಣಗಳನ್ನು ನೀಡಿರುವುದಿಲ್ಲ. ಹಾಗಾಗಿ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ದಿನಾಂಕ:10.02.2020 ರಂದು ರೂ.2 ಲಕ್ಷ ಹಣವನ್ನು ವಾದಿಯಿಂದ ತಾನು ಪಡೆಯುವ ಸಮಯದಲ್ಲಿ ಭದ್ರತೆಗಾಗಿ ತಾನು ವಾದಿಗೆ ನಿಶಾನೆ.ಪಿ.1 ರ ಚೆಕ್ಕನ್ನು ಕೊಟ್ಟಿರುತ್ತಾರೆ ಎಂಬುದನ್ನು ಸೂಕ್ತವಾದ ಮತ್ತು ನ್ಯಾಯಾಲಯವು ನಂಬಬಹುದಾದ ಸಾಕ್ಷ್ಯಾಧಾರಗಳ ಮೂಲಕ ಪ್ರತಿವಾದಿಯು ರುಜುವಾತುಪಡಿಸಲು ವಿಫಲರಾಗಿರುತ್ತಾರೆ.

57. ಈ ಮೇಲಿನ ವಾದಿ ಮತ್ತು ಪ್ರತಿವಾದಿಯ ವಾದ ಪತ್ರ, ಪ್ರತಿವಾದ ಪತ್ರ, ಉಭಯ ಪಕ್ಷಗಾರರ ಸಾಕ್ಷ್ಯಗಳನ್ನು ಹಾಗೂ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಪ್ರತಿವಾದಿಯು ವಾದಿಯಿಂದ ದಿನಾಂಕ 22.02.2021 ರಂದು ರೂ.3,00,000/- ಹಣವನ್ನು ಸಾಲವಾಗಿ ಪಡೆದಿರುತ್ತಾನೆ, ಸದರಿ ಹಣವನ್ನು ಪಾವತಿಸಲು ಪ್ರತಿವಾದಿಯು ಭಾಧ್ಯಸ್ಥರಾಗಿರುವುದು ಹಾಗೂ ಸದರಿ ಸಾಲದ ಹಣದ ಮರುಪಾವತಿಗಾಗಿ ನಿಶಾನೆ ಪಿ. 1 ರ ಚೆಕ್ಕನ್ನು ನೀಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ವಾದಿಯು ಪ್ರತಿವಾದಿಗೆ ಸಾಲದ ಹಣವನ್ನು ಪಾವತಿಸಲು ಸಾಕಷ್ಟು

ಕಾಲಾವಕಾಶ ನೀಡಿದ್ದಾಗ್ಯೂ ಕೂಡ ಪ್ರತಿವಾದಿಯು ಸಾಲದ ಹಣವನ್ನು ಮರುಪಾವತಿ ಮಾಡದಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

58. ವಾದಿಯು ಈ ದಾವೆಯಲ್ಲಿ ಒಟ್ಟು ರೂ.4,44,800-00 ಹಣವನ್ನು ವಾರ್ಷಿಕ ಪ್ರತಿಶತ 24% ರ ಬಡ್ಡಿಯಂತೆ ಹಣವನ್ನು ಈ ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಪ್ರತಿವಾದಿಯು ವಾದಿಗೆ ಹಣ ಪಾವತಿಸುವವರೆಗೂ ಪ್ರತಿವಾದಿಯಿಂದ ಕೊಡಿಸುವಂತೆ ಕೋರಿರುತ್ತಾರೆ. ವಾದಿಯು ಈ ದಾವೆಯಲ್ಲಿ ಪ್ರತಿವಾದಿಯಿಂದ ರೂ.3,00,000/- ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ. ವಾದಿಯು ತಮ್ಮ ವಾದಪತ್ರದಲ್ಲಿ ತಮ್ಮ ಮತ್ತು ಪ್ರತಿವಾದಿಯ ಮಧ್ಯ ವ್ಯಾಪಾರದ ಅಭಿವೃದ್ದಿಗಾಗಿ ಸಾಲದ ವ್ಯವಹಾರವಾಗಿರುತ್ತದೆ ಎಂದು ನಮೂದಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯ ಮಧ್ಯ ಆದ ಹಣದ ವ್ಯವಹಾರವು ವ್ಯಾಪಾರ ಅಭಿವೃದ್ದಿಗಾಗಿ ಆಗಿರುತ್ತದೆ ಮತ್ತು ವಾದಿ ಮತ್ತು ಪ್ರತಿವಾದಿಯ ಮಧ್ಯೆ ಸಾಲದ ಹಣಕ್ಕೆ ವಾರ್ಷಿಕ ಶೇಕಡ 24% ರ ಬಡ್ಡಿಯಂತೆ ಪ್ರತಿವಾದಿಯು ಕೊಡಲು ಒಪ್ಪಿಕೊಂಡಿರುತ್ತಾರೆ ಎಂಬುದರ ಕುರಿತು ಯಾವುದೇ ಸಾಕ್ಷ್ಯಗಳನ್ನು ವಾದಿಯು ಹಾಜರುಪಡಿಸಿರುವುದಿಲ್ಲ. ಹಾಗಾಗಿ ವಾದಿ ಹಾಗೂ ಪ್ರತಿವಾದಿಯ ನಡುವಿನ ಹಣಕಾಸಿನ ವ್ಯವಹಾರದ ಸ್ವರೂಪವನ್ನು ನಿರ್ಧಿಷ್ಟವಾಗಿ ಹೇಳಿರುವುದಿಲ್ಲ. ಹಾಗಾಗಿ ವಾದಿಯು ಈ ದಾವೆಯಲ್ಲಿ ಕೋರಿರುವಂತೆ ರೂ.3,00,000/- ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ. ವಾದಿಯು ದಿನಾಂಕ:22.02.2021 ರಿಂದ ಪ್ರತಿವಾದಿಯು ಹಣವನ್ನು ಪಾವತಿಸುವ ದಿನಾಂಕದವರೆಗೂ ಪ್ರತಿವಾದಿಯಿಂದ ರೂ.3,00,000/- ಮೊತ್ತಕ್ಕೆ ವಾರ್ಷಿಕ ಶೇ.9 ರ ಬಡ್ಡಿ ದರದಲ್ಲಿ ಬಡ್ಡಿಯನ್ನು ಪಡೆಯಲು ಹಾಗೂ ವಾದಿಯು ದಾವೆಯ ಕುರಿತಾದ ಖರ್ಚನ್ನು ಪಡೆಯಲು ಅರ್ಹರಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ವಿಶ್ಲೇಷಣೆಯಿಂದಾಗಿ ಮರು ರೂಪಿಸಲಾದ ವಿವಾದಾಂಶ ಸಂಖ್ಯೆ -1, ವಿವಾದಾಂಶ ಸಂಖ್ಯೆ 2 ಮತ್ತು 3 ನ್ನು ಸಕಾರಾತ್ಮಕ, ವಿವಾದಾಂಶ ಸಂಖ್ಯೆ-4 ನಕಾರಾತ್ಮಕ, ವಿವಾದಾಂಶ ಸಂಖ್ಯೆ-5 ಮತ್ತು 6 ನ್ನು ಭಾಗಶಃ ಸಕಾರಾತ್ಮಕ, ಎಂದು ನಿರ್ಣಯಿಸಲಾಗಿದೆ.

59. ವಿವಾದಾಂಶ 7- ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿರುತ್ತದೆ

ವಾದಿಯು ಪ್ರತಿವಾದಿಯಿಂದ ರೂ.**3,00,000/-** ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ.

ವಾದಿಯು ಪ್ರತಿವಾದಿಯಿಂದ ರೂ.**3,00,000/-** ಮೊತ್ತಕ್ಕೆ ದಿನಾಂಕ:**22.02.2021** ರಿಂದ ಹಣವನ್ನು ಪಾವತಿಸುವ ದಿನಾಂಕದವರೆಗೂ ವಾರ್ಷಿಕ ಶೇ.**9** ರ ಬಡ್ಡಿ ದರದಲ್ಲಿ ಬಡ್ಡಿಯನ್ನು ಪಡೆಯಲು ಅರ್ಹರಿರುತ್ತಾರೆ.

ಈ ಪ್ರಕಾರ ಡಿಕ್ರಿ ಬರೆಯುವಂತೆ ಆದೇಶಿಸಲಾಗಿದೆ

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ: 30 ನೇ ನವೆಂಬರ್ 2024 ರಂದು ನಾನು ಉದ್ಘೋಷಿಸಿದ್ದೇನೆ.)

IRAPPA DHAVALESHWAR

Digitally signed by IRAPPA DHAVALESHWAR
Date: 2024.12.04 11:25:27 +0530

(ಈರಪ್ಪ ಢವಳೇಶ್ವರ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಬಳ್ಳಾರಿ .

ಅನುಬಂಧ

ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:

ಪಿ.ಡಬ್ಲೂ.1 : ಶ್ರೀಮತಿ ಸುರೇಖಾ

ಪಿ.ಡಬ್ಲೂ.2 : ಕೃಷ್ಣ ಕಿಶೋರ್

ಪಿ.ಡಬ್ಲೂ.3 : ಅನಿತಾ ಕುಮಾರಿ

<u>ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>

ನಿ.ಪಿ.1 : ಚೆಕ್

ನಿ.ಪಿ.1(ಎ) : ಪ್ರತಿವಾದಿಯ ಸಹಿ

ನಿ.ಪಿ.2 : ಬ್ಯಾಂಕಿನವರು ನೀಡಿದ ಹಿಂಬರಹ

ನಿ.ಪಿ.3 : ನೋಟೀಸ್

ನಿ.ಪಿ.4 : ಅಂಚೆ ರಸೀದಿ

ನಿ.ಪಿ.5 : ಅಂಚೆ ಸ್ವೀಕೃತಿ

ನಿ.ಪಿ.6 : ಅಕೌಂಟ್ ಎಕ್ಸ್ಟ್ರಾಕ್ಟ್

<u>ಪ್ರತಿವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-</u>

ಡಿ.ಡಬ್ಲೂ.1 : ವೇಣು ಗೋಪಾಲ್

<u>ಪ್ರತಿವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>

ನಿ.ಡಿ.1 : ಸ್ಟಾಪ್ ಪೇಮೆಂಟ್ ದಾಖಲಾತಿ

IRAPPA DHAVALESHWAR
Digitally signed by IRAPPA DHAVALESHWAR
Date: 2024.12.04 11:25:16 +0530

(ಈರಪ್ಪ ಧವಳೇಶ್ವರ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಬಳ್ಳಾರಿ .